# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## *ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕಃ 09.01.2017ರಂದು ನಡೆದ ಸಭೆಯ ನಡವಳಿಗಳು*

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| **ಎಂ.ಕೆ.ಗುಣಶೇಖರ್ – ಅಧ್ಯಕ್ಷರು** | ಕೌನ್ಸಿಲ್ ಕಾರ್ಯದರ್ಶಿ, |
| **ಬಿ.ಎನ್.ನಿತೀಶ್ ಪುರುಶೋತ್ತಮ – ಸದಸ್ಯರು** | ವಿಶೇಷ ಆಯುಕ್ತರು (ಯೋಜನೆ), |
| **ಕೆ.ಎಂ.ಮಮತ – ಸದಸ್ಯರು** | ಮುಖ್ಯಲೆಕ್ಕಾಧಿಕಾರಿ, ಮುಖ್ಯ ಆರ್ಥಿಕ ಅಧಿಕಾರಿ, |
| **ಜೆ.ಎನ್.ಶ್ರೀನಿವಾಸಮೂರ್ತಿ – ಸದಸ್ಯರು** | ಮುಖ್ಯ ಅಭಿಯಂತರರು (ಯಲಹಂಕ) |
| **ಎಂ.ಮಹದೇವ – ಸದಸ್ಯರು** | ವಿದ್ಯಾಧಿಕಾರಿ |
| **ಪದ್ಮಾವತಿ ನರಸಿಂಹಮೂರ್ತಿ – ಸದಸ್ಯರು** | ಕಾರ್ಯಪಾಲಕ ಅಭಿಯಂತರರು(ಬೆಂಗಳೂರು–ದಕ್ಷಿಣ), (ರ.ಮೂ.ಸೌ. ವಿಶೇಷ–ವಿಭಾಗ), (ಚಾಮರಾಜಪೇಟೆ), (ಹೆಬ್ಬಾಳ), (ಸಾರಿಗೆ), (ಬೆಂಗಳೂರು–ದಕ್ಷಿಣ) |
| **ಮಮತ ಕೆ.ಬಿ. ವಾಸುದೇವ – ಸದಸ್ಯರು** | |
| **ಎಂ.ಪದ್ಮಾವತಿ ಶ್ರೀನಿವಾಸ್ – ಸದಸ್ಯರು** | ಸಹಾಯಕ ಕಾರ್ಯಪಾಲಕ ಅಭಿಯಂತರರು (ಚಾಮರಾಜಪೇಟೆ), (ಸಾರಿಗೆ), (ರ.ಮೂ.ಸೌ. ವಿಶೇಷ–ವಿಭಾಗ), (ಗಿರಿನಗರ) |
| **ಎನ್.ಲೋಕೇಶ್ – ಸದಸ್ಯರು** | ಉಪ ಕಾನೂನು ಅಧಿಕಾರಿ, |
| **ಎಂ. ಶಶಿರೇಖಾ – ಸದಸ್ಯರು** | ಸಂಬಂಧಪಟ್ಟ ಅಧಿಕಾರಿಗಳು |
| **ಬಿ.ಸುಮಂಗಲ – ಸದಸ್ಯರು** | --- |

***(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)***

## *01]. ವಿಷಯದ ಸಂಖ್ಯೆಃ ತೆಆಸ್ಥಾಸ/50/2016–17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 01–08–2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2015–16 ನೇ ಸಾಲಿನ ಆಯವ್ಯಯದಲ್ಲಿ ಬಿಬಿಎಂಪಿಗೆ ಘೋಷಿಸಿರುವ ರೂ. 1500.00 ಕೋಟಿಗಳ ಅನುದಾನದ ಪೈಕಿ ಸರ್ಕಾರದ ಆದೇಶ ಸಂಖ್ಯೆ : ನಅಇ 279 ಎಸ್.ಎಫ್.ಸಿ 2015, ಬೆಂಗಳೂರು ದಿನಾಂಕ : 08.01.2016 ರಲ್ಲಿ ರೂ. 976.00 ಕೋಟಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಿದೆ. ಅದರಲ್ಲಿ ಕ್ರ.ಸಂ 1 ರಲ್ಲಿ ಬೆಂಗಳೂರು ನಗರದಲ್ಲಿ ಘನತ್ಯಾಜ್ಯ ಸಂಸ್ಕರಣ ಘಟಕಗಳ ಕಾರ್ಯಾರಂಭಕ್ಕೆ ರೂ. 200.00 ಕೋಟಿಗಳ ಅನುದಾನ ನಿಗಧಿಪಡಿಸಿದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 238 ಎಸ್.ಎಫ್.ಸಿ 2016, ಬೆಂಗಳೂರು ದಿನಾಂಕ : 18–06–2016 ರಲ್ಲಿ ಮೇಲ್ಕಂಡ ರೂ. 200.00 ಕೋಟಿಗಳಲ್ಲಿ ವಾರ್ಡ್ ಸಂಖ್ಯೆ 40ರ ದೊಡ್ಡಬಿದರಕಲ್ಲು ಘಟಕ, ವಾರ್ಡ್ 198ರ ಲಿಂಗಧೀರನಹಳ್ಳಿ ಘಟಕ, ಸುಬ್ಬರಾಯನ ಪಾಳ್ಯ ಘಟಕ, ಸೀಗೆಹಳ್ಳಿ, ಕನ್ನಹಳ್ಳಿ ಘಟಕಗಳ ಒಟ್ಟು 32 ಕಾಮಗಾರಿಗಳ ಅಂದಾಜು ಮೊತ್ತ ರೂ. 66.00 ಕೋಟಿಗಳಿಗೆ ನಗರೋತ್ಥಾನ ಯೋಜನೆಯ ಲೆಕ್ಕಶೀರ್ಷಿಕೆ ಅಡಿ ಭರಿಸಲು ಅನುಮೋದನೆ ನೀಡಿದೆ. ನಗರೋತ್ಥಾನ ಯೋಜನೆಯ ಕಾಮಗಾರಿಗಳನ್ನು 2016–17ರ ಲೆಕ್ಕಶೀರ್ಷಿಕೆ "P–3106 ನಗರೋತ್ಥಾನ ಕಾಮಗಾರಿಗಳು" Current Works ಅಡಿ ಜಾಬ್‌ಸಂಖ್ಯೆ ನೀಡಬೇಕಿದೆ. ಕಾಮಗಾರಿಗಳಿಗೆ ಜಾಬ್‌ಸಂಖ್ಯೆ ನೀಡಲು ಮಾನ್ಯ ಆಯುಕ್ತರು ಆದೇಶಿಸಿರುತ್ತಾರೆ. 2016–17ರ ಆಯವ್ಯಯದಲ್ಲಿ (ಪುಟಸಂಖ್ಯೆ 184) ಲೆಕ್ಕಶೀರ್ಷಿಕೆ P–3106ನ CurrentWorks ಅಡಿ ಅನುದಾನ ಮೀಸಲಿರಿಸಿರುವುದಿಲ್ಲ. ಸರ್ಕಾರದ ಅನುಮೋದನೆಯಂತೆ ಕಾಮಗಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಮದ ತುರ್ತಾಗಿ ಕೈಗೊಳ್ಳಬೇಕಿದೆ. ಆಯವ್ಯಯದಲ್ಲಿ ಅನುದಾನ ಮೀಸಲಿರಿಸದ ಕಾರಣ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ 32 ಕಾಮಗಾರಿಗಳ ಮೊತ್ತ ರೂ. 6600.00 ಲಕ್ಷಗಳ ಅನುದಾನವನ್ನು 2016–17ರ ಲೆಕ್ಕಶೀರ್ಷಿಕೆ P–3106ನ Current Works ಅಡಿ ಅಳವಡಿಸಿಕೊಂಡು 310–

17–000026 ರಿಂದ 310–17–000057 ರವರೆಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಘಟನೋತ್ತರ ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

## ***02]. ವಿಷಯದ ಸಂಖ್ಯೆ: ತೆಆಸ್ಥಾಸ/52/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 08–08–2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2015–16ನೇ ಸಾಲಿಗೆ ಬಿಬಿಎಂಪಿಗೆ ಘೋಷಿಸಿರುವ ರೂ. 1500.00 ಕೋಟಿಗಳ ಅನುದಾನದಲ್ಲಿ ಬಿಬಿಎಂಪಿಗೆ ಹೊಸದಾಗಿ ಸೇರ್ಪಡೆಗೊಂಡಿರುವ ಹಿಂದಿನ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ 279 ನಆಈ ಎಸ್.ಎಫ್.ಸಿ 2015, ಬೆಂಗಳೂರು, ದಿನಾಂಕ 08–01–2016 ರಲ್ಲಿ ರೂ. 250.00 ಕೋಟಿಗಳ ವಿಶೇಷ ಅನುದಾನವನ್ನು ಮೀಸಲಿರಿಸಿದೆ. ಸರ್ಕಾರದ ಅನುಮೋದನೆಯಂತೆ 2015–16 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿ ಪಿ–3089 ಅಡಿ ರೂ. 175.00 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಉಳಿಕೆ ರೂ.75.00 ಕೋಟಿಗಳ ಪೈಕಿ ಪ್ರಸ್ಥುತ ನಅಇ 73 ಎಸ್‌ಎಫ್‌ಸಿ 2016, ಬೆಂಗಳೂರು ದಿನಾಂಕ: 25–06–2016ರಲ್ಲಿ ಮಹದೇವಪುರ ವಿಧಾನಸಭಾ ಕ್ಷೇತ್ರದ ರೂ.20.00 ಕೋಟಿಗಳಿಗೆ ಅನುಮೋದನೆ ನೀಡಿದೆ. 2016–17ರ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ–3089 ಅಡಿ ಚಾಲ್ತಿ ಕಾಮಗಾರಿಗಳಿಗಾಗಿ ಅನುದಾನ ಮೀಸಲಿರಿಸಿರುವುದಿಲ್ಲ. ಸರ್ಕಾರದ ಅನುಮೋದನೆಯಂತೆ ಜಾಬ್‌ಸಂಖ್ಯೆ ನೀಡಿ ಕಾಮಗಾರಿ ಅನುಷ್ಠಾನಗೊಳಿಸಲು ಪಿ–3089 ಅಡಿ ರೂ.20.00 ಕೋಟಿಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಬೇಕಿದ್ದು, ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 08.08.2016ರ ಟಿಪ್ಪಣಿಯನ್ನು ಒಪ್ಪುತ್ತಾ, ಸರ್ಕಾರದ ಅಧಿಸೂಚನೆ ಸಂಖ್ಯೆ ಆಇ/751/ವೆಚ್ಚ/12/16 ರಂತೆ ಕ್ರಮಕೈಗೊಳ್ಳುವುದು ಮತ್ತು ಸದರಿ ಕಾಮಗಾರಿಗಳನ್ನು ಜಾಬ್ ಅನುಸಾರ ಕೆ.ಆರ್.ಐ.ಡಿ.ಎಲ್ ಮೂಲಕ ಕೈಗೊಳ್ಳಲು ಹಾಗೂ ಪ್ರತಿ ಕಾಮಗಾರಿಗೂ ಪ್ರತ್ಯೇಕ ಜಾಬ್ ನಂಬರ್ ನೀಡಲು ಕ್ರಮವಹಿಸುವಂತೆ ಸಮಿತಿಯು ತೀರ್ಮಾನಿಸಿತು.**

## ***03]. ವಿಷಯದ ಸಂಖ್ಯೆ: ತೆಆಸ್ಥಾಸ/56/2016–17***

ಜಂಟಿ ಆಯುಕ್ತರು (ಆರೋಗ್ಯ) ರವರ ದಿನಾಂಕ: 22.08.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಜಂಟಿ ಆಯುಕ್ತರು (SWM) ರವರು ಕೋಗಿಲು–ಕಣ್ಣೂರು ಮುಖ್ಯರಸ್ತೆಯಿಂದ ಬೆಳ್ಳಹಳ್ಳಿ ವೈಜ್ಞಾನಿಕ ಘನತ್ಯಾಜ್ಯ ವಿಲೇವಾರಿ ಘಟಕಗಳಿಗೆ ಪರ್ಯಾಯ ರಸ್ತೆ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ರೂ. 204.00 ಲಕ್ಷಗಳಿಗೆ ಕೇಂದ್ರ ಸರ್ಕಾರದ ಯೋಜನೆ **ಸ್ವಚ್ಛ ಭಾರತ್ ಮಿಷನ್** ಅಡಿಯಲ್ಲಿ ಬಿಡುಗಡೆಯಾಗಿರುವ **ರೂ. 41.15 ಕೋಟಿಗಳಲ್ಲಿ** ಜಾಬ್‌ಸಂಖ್ಯೆ ನೀಡಲು ಕೋರಿರುತ್ತಾರೆ. ಸದರಿ ಮೊತ್ತಕ್ಕೆ ಕ್ರಿಯಾಯೋಜನೆ ಲಭ್ಯವಿಲ್ಲದ ಬಗ್ಗೆ ಚರ್ಚಿಸಲಾಗಿ, ಅವಶ್ಯಕತೆಗೆ ಅನುಗುಣವಾಗಿ SWM ಕಾಮಗಾರಿ ಕೈಗೊಳ್ಳಬೇಕಿರುವುದರಿಂದ ಸದರಿ ಮೊತ್ತಕ್ಕೆ ಕ್ರಿಯಾಯೋಜನೆ ಸಿದ್ದಪಡಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮಾನ್ಯ ಆಯುಕ್ತರು ಕಾಮಗಾರಿ ಕೈಗೊಳ್ಳಲು ಜಾಬ್‌ಸಂಖ್ಯೆ ನೀಡಲು ಅನುಮೋದನೆ ನೀಡಿರುತ್ತಾರೆ.

2016–17ರ ಆಯವ್ಯಯದ (ಪುಟಸಂಖ್ಯೆ–180) ರಲ್ಲಿ ಕೇಂದ್ರ ಸರ್ಕಾರದ ಅನುದಾನದ ಕಾಮಗಾರಿಗಳು– ಸ್ವಚ್ಚ ಭಾರತ್ ಅಭಿಯಾನದ ಕಾಮಗಾರಿಗಳು ಪಿ–3112 ಅಡಿ ರೂ. 150.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು, ರೂ. 41.15 ಕೋಟಿ ಅನುದಾನವನ್ನು ಈಗಾಗಲೆ ಬಿಡುಗಡೆಗೊಳಿಸಿರುವುದರಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ, ಲೆಕ್ಕಶೀರ್ಷಿಕೆ ಪಿ–3112 ಅಡಿ ರೂ. 49.88 ಲಕ್ಷಗಳ ಅನುದಾನವನ್ನು ಅಳವಡಿಸಿಕೊಂಡು ರೂ. 199.88 ಲಕ್ಷಗಳಿಗೆ ಈಗಾಗಲೇ ಜಾಬ್‌ಸಂಖ್ಯೆ ನೀಡಲಾಗಿರುತ್ತದೆ. ಸದರಿ ಪ್ರಸ್ತಾವನೆ ಮೊತ್ತ ರೂ. 204.00 ಲಕ್ಷಗಳಾಗಿದ್ದು, ಜಾಬ್‌ಸಂಖ್ಯೆ ನೀಡಲು ರೂ. 204.00 ಲಕ್ಷಗಳ ಅನುದಾನದ ಕೊರತೆ ಇರುತ್ತದೆ. ಆಯವ್ಯಯದಲ್ಲಿ ಕೊರತೆ ಅನುದಾನಕ್ಕೆ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ಈಗಾಗಲೇ ಸ್ವಚ್ಚ ಭಾರತ್ ಮಿಷನ್ ಯೋಜನೆಯಡಿ ರೂ. 41.15 ಕೋಟಿ ಅನುದಾನ ಬಿಡುಗಡೆಗೊಳಿಸಿರುವುದರಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ ಲೆಕ್ಕಶೀರ್ಷಿಕೆ ಪಿ–3112 ಅಡಿ ರೂ. 204.00 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ರೂ. 204.00 ಲಕ್ಷಗಳಿಗೆ 310–17–000058 ಜಾಬ್‌ಸಂಖ್ಯೆ ನೀಡಲಾಗಿದೆ. ಘಟನೋತ್ತರ ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

## ***04]. ವಿಷಯದ ಸಂಖ್ಯೆ: ತೆಆಸ್ಥಾಸ/73/2016–17***

ಆಯುಕ್ತರ ದಿನಾಂಕ: 03–09–2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ ಕೃಷ್ಣಮೂರ್ತಿ, ರಾಜ್ಯಪ್ರಧಾನ ಕಾರ್ಯದರ್ಶಿಗಳು ತಾಯ್ನಾಡು ಕನ್ನಡ ರಕ್ಷಣಾ ವೇದಿಕೆ, ವಿಳಾಸ ನಂ. 3/1, 8ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ಪಟೇಲ್ ಹನುಮಪ್ಪ ಬಿಲ್ಡಿಂಗ್ ಶಿವನಗರ ರಾಜಾಜಿನಗರ ಬೆಂಗಳೂರು 560010 ರವರು ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಅರ್ಜಿ ಸಲ್ಲಿಸಿ, ತಮ್ಮ ಸಂಸ್ಥೆಯ ವತಿಯಿಂದ ನಡೆಸಲಾಗುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರಾಜ್ಯಮಟ್ಟದಲ್ಲಿ ವರ್ಷಪೂರ್ತಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಇದರ ಭಾಗವಾಗಿ ಈ ಸಾಲಿಗೆ ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯರವರ 156ನೇ ಹಾಗೂ ಸಂಗೊಳ್ಳಿರಾಯಣ್ಣ, ಕಿತ್ತೂರುಚನ್ನಮ್ಮ ಜನ್ಮೋತ್ಸವ ಮತ್ತು ಜಾನಪದ ಸಾಹಿತ್ಯಗೋಷ್ಠಿ, ಕವಿಗೋಷ್ಠಿ, ಚಿತ್ರಕಲಾಶಿಬಿರ, ವೇಷಭೂಷಣ ಸ್ಪರ್ಧೆ ಹಾಗೂ ರಸ್ತೆ ಬದಿಗಳಲ್ಲಿ ಗಿಡನೆಡುವ ಕಾರ್ಯಕ್ರಮ ಮತ್ತು ಕನ್ನಡಪರ ಕಾರ್ಯಕ್ರಮಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೂ12.00 ಲಕ್ಷಗಳ ಸಹಾಯಧನವನ್ನು ನೀಡಬೇಕೆಂದು ಕೋರಿಕೊಂಡಿರುತ್ತಾರೆ.

ಮುಂದುವರೆದಂತೆ, 2016–17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 24 ಸಂಸ್ಕೃತಿ ಮತ್ತು ಕ್ರೀಡೆ, ಪಿ–048 ಕೊಡುಗೆಗಳು ಮತ್ತು ಸಹಾಯಧನಕ್ಕಾಗಿ ರೂ.500.00 ಲಕ್ಷಗಳನ್ನು ಮೀಸಲಿರಿಸಲಾಗಿರುತ್ತದೆ. ಸದರಿ ಸಂಸ್ಥೆಗೆ ಅನುಬಂಧ–2ರಲ್ಲಿ ಅನುದಾನವು ಹಂಚಿಕೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತಾಯ್ನಾಡು ಕನ್ನಡ ರಕ್ಷಣಾ ವೇದಿಕೆ, ರವರಿಗೆ' ಅನುದಾನ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಗೆ ರೂ.2.00 ಲಕ್ಷ (ಎರಡು ಲಕ್ಷ) ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

## ***05]. ವಿಷಯದ ಸಂಖ್ಯೆ: ತೆಆಸ್ಥಾಸ/80/2016-17***

ಆಯುಕ್ತರ ದಿನಾಂಕ: 19-08-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕೇಂದ್ರ ಪುರಸ್ಕೃತ ಸ್ವಚ್ಛ ಭಾರತ್ ಮಿಷನ್ ಯೋಜನೆಯನ್ನು ಅನುಷ್ಠಾನಗೊಳಿಸಲು ಐಇಸಿ ಹಾಗೂ ಸಾಮರ್ಥ್ಯ ನಿರ್ಮಾಣದ ಚಟುವಟಿಕೆಗಳಿಗಾಗಿ ರೂ.1,50,00,000/- (ಒಂದು ಕೋಟಿ ಐವತ್ತು ಲಕ್ಷಗಳನ್ನು ಕೇಂದ್ರ ಸರ್ಕಾರವು ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ರಾಜ್ಯ ಸಕಾರಕ್ಕೆ ಬಿಡುಗಡೆ ಮಾಡಿರುವ ನಿಧಿಯಿಂದ ಉಲ್ಲೇಖಿತ ಆದೇಶ (1)ರ ರೀತ್ಯಾ ಬಿಬಿಎಂಪಿ ಬಿಡುಗಡೆಗೊಳಿಸಲಾಗಿದೆ. ಎರಡನೇ ಹಂತದಲ್ಲಿ ರೂ.30,00,000/- (ಮೂವತ್ತು ಲಕ್ಷ ರೂಪಾಯಿಗಳು) ಗಳನ್ನು ಐಇಸಿ ಚಟುವಟಿಕೆ ನಡೆಸಲು ಪಾಲಿಕೆಗೆ ಉಲ್ಲೇಖ (2)ರ ರೀತ್ಯಾ ಬಿಡುಗಡೆಗೊಳಿಸಲಾಗಿದೆ. (ಒಟ್ಟಾರೆ ರೂ.1,80,00,000/-, ಒಂದು ಕೋಟಿ ಎಂಭತ್ತು ಲಕ್ಷ ರೂಪಾಯಿಗಳು)

ಈಗಾಗಲೇ ಸಾರ್ವಜನಿಕ ಸಂಪರ್ಕಾಧಿಕಾರಿಗಳು ಘನತ್ಯಾಜ್ಯ ನಿರ್ವಹಣೆ ವಿಷಯಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ದಿನ ಪತ್ರಿಕೆಗಳಲ್ಲಿ ಜಾಹೀರಾತು, ವಾಹನ ನಿಲ್ದಾಣದ ಶೆಲ್ಟರ್‌ಗಳಲ್ಲಿ ಜಾಹೀರಾತು ಹಾಗೂ ಬೀದಿ ನಾಟಕಗಳನ್ನು ಏರ್ಪಡಿಸಿ ಬಿಬಿಎಂಪಿ ಖಾತೆಯಿಂದ ಹಣ ಖರ್ಚು ಮಾಡಿದ್ದು ವಿವರಗಳು ಈ ಕೆಳಕಂಡಂತಿದೆ:

| | | |
|---|---|---|
| 1. | ದಿನ ಪತ್ರಿಕೆಗಳಲ್ಲಿ ಜಾಹೀರಾತಿಗೆ | - ರೂ.110 ಲಕ್ಷಗಳು |
| 2. | ಬಸ್ ನಿಲ್ದಾಣಗಳಲ್ಲಿ ಜಾಹೀರಾತಿಗಾಗಿ | - ರೂ. 13 ಲಕ್ಷಗಳು |
| 3. | ಬೀದಿ ನಾಟಕಕ್ಕೆ | - ರೂ. 51 ಲಕ್ಷಗಳು |
| | **ಒಟ್ಟು** | **- ರೂ.174 ಲಕ್ಷಗಳು** |

**(ಒಟ್ಟು ನೂರಾ ಎಪ್ಪತ್ತಾನಾಲ್ಕು ಲಕ್ಷಗಳು ಮಾತ್ರ)**

ಇದೀಗ ಸ್ವಚ್ಛ ಭಾರತ್ ಅಭಿಯಾನದಡಿ ಐಇಸಿ ಹಾಗೂ ಸಾರ್ವಜನಿಕರಲ್ಲಿ ಜಾಗೃತಿ, ಸಾಮರ್ಥ್ಯ ನಿರ್ಮಾಣ, ಆಡಳಿತಾತ್ಮಕ ಮತ್ತು ಕಛೇರಿ ವೆಚ್ಚಗಳಿಗಾಗಿ ಬಂದಿರುವ 1.80 ಕೋಟಿ ರೂ.ಗಳ ಲೆಕ್ಕದಲ್ಲಿ ಪಾಲಿಕೆಯಿಂದ ಖರ್ಚು ಮಾಡಿರುವ ಹಣವನ್ನು ಮರುಪಾವತಿ ಮಾಡಿಕೊಂಡು ಲೆಕ್ಕಹೊಂದಾಣಿಕೆ ಮಾಡಿಕೊಳ್ಳಲು ಹಾಗೂ ಬಳಕೆ ಪ್ರಮಾಣ ಪತ್ರವನ್ನು ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## ***06]. ವಿಷಯದ ಸಂಖ್ಯೆ: ತೆಆಸ್ಥಾಸ/82/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 23-09-2016ರಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ ನಅಇ 279 ಎಸ್‌ಎಫ್‌ಸಿ 2015, ಬೆಂಗಳೂರು, ದಿನಾಂಕ 08-01-2016 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡಿರುವ ಹಿಂದಿನ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗೆ 2015-16 ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರವು 250.00 ಕೋಟಿಗಳ ಅನುದಾನ ಘೋಷಿಸಿದೆ. ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ರೂ. 2000.00 ಲಕ್ಷಗಳ ಅನುದಾನ ಹಂಚಿಕೆ ಮಾಡಿರುತ್ತದೆ. ಸರ್ಕಾರದ ಅನುಮೋದನೆಯಂತೆ 2015-16 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ ಪಿ-3089 "ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡ 7 ನಗರಸಭೆ ಮತ್ತು 1 ಪುರಸಭೆಗಳಲ್ಲಿ ವಿಶೇಷ ಅಭಿವೃದ್ಧಿ ಕಾಮಗಾರಿಗಳು" ಅಡಿ ಒಟ್ಟು ರೂ. 175.00 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಉಳಿಕೆ ರೂ. 75.00 ಕೋಟಿಗಳಲ್ಲಿ

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ರೂ. 20.00 ಕೋಟಿಗಳ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ/199/ಎಸ್.ಎಫ್.ಸಿ/2016 ಬೆಂಗಳೂರು ದಿನಾಂಕ: 21-06-2016 ರ ಆದೇಶದಲ್ಲಿ ನಗರೋತ್ಥಾನ ಮತ್ತು ವಿಶೇಷ ಮೂಲಭೂತ ಸೌಕರ್ಯ, ಕೆರೆಗಳು ಮೊತ್ತ ರೂ. 7300-00 ಕೋಟಿಗಳ ಕ್ರಿಯಾ ಯೋಜನೆ Annexure-1 to Annexure-18 ರ ವರೆಗೆ ಅನುಮೋದನೆ ನೀಡಿದ್ದು, Annexure-11 ರಲ್ಲಿ ಸರ್ಕಾರದ ಆದೇಶ ಸಂಖ್ಯೆ ನಅಇ 279 ಎಸ್ಎಫ್‌ಸಿ 2015, ಬೆಂಗಳೂರು, ದಿನಾಂಕ 08-01-2016 ರ ಆದೇಶದಂತೆ ಹಿಂದಿನ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ರೂ. 250.00 ಕೋಟಿಗಳ ಅನುದಾನ ಒದಗಿಸಿದೆ. 2016-17 ನೇ ಸಾಲಿನ ಬಿ.ಬಿ.ಎಂ.ಪಿ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ-3089 "ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡ 7 ನಗರಸಭೆ ಮತ್ತು 1 ಪುರಸಭೆಗಳಲ್ಲಿ ವಿಶೇಷ ಅಭಿವೃದ್ಧಿ ಕಾಮಗಾರಿಗಳು" ರಡಿ ಚಾಲ್ತಿ ಕಾಮಗಾರಿಗಳಿಗೆ ಅನುದಾನ ಮೀಸಲಿರಿಸಿರುವುದಿಲ್ಲ. ಸರ್ಕಾರದಿಂದ ಅನುದಾನ ಒದಗಿಸಿರುವುದರಿಂದ ಲೆಕ್ಕಶೀರ್ಷಿಕೆ ಪಿ-3089 ಅಡಿ ರೂ. 2000.00 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಳ್ಳಲು ಹಾಗೂ ಸದರಿ ಕ್ರಿಯಾ ಯೋಜನೆ ಸರ್ಕಾರದಿಂದ ಅನುಮೋದನೆಯಾದ ನಂತರ ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## ***07]. ವಿಷಯದ ಸಂಖ್ಯೆ: ತೆಆಸ್ಥಾಸ/92/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 22.11.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 163, ಸ್ವತ್ತಿನ ಸಂಖ್ಯೆ 228, 1ನೇ ಅಡ್ಡ ರಸ್ತೆ, 2ನೇ ಬ್ಲಾಕ್, 3ನೇ ಘಟ್ಟ, ಬಿ.ಎಸ್.ಕೆ 3 ನೇ ಹಂತ ಇಲ್ಲಿ ಅನಧಿಕೃತ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಅಂದಾಜು ಮೊತ್ತ ರೂ. 1.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ ಬಸವನಗುಡಿ ರವರು ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ವೆಚ್ಚವನ್ನು 2016-17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಕೆ.ಎಂ.ಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳಬೇಕಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

| **ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" Budget Book Page No. 111 (ರೂ. ಲಕ್ಷಗಳಲ್ಲಿ)** | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯಂತೆ ಅನುದಾನ ಅಳವಡಿಸಿಕೊಂಡಿರುವ ಮೊತ್ತ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ಥಾವನೆಯ ಮೊತ್ತ |
| **150.00** | **8.00** | **157.45** | **0.55** | **1.00** |

ಜಾಬ್‌ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುವ ಮೊತ್ತ ರೂ. 1.00 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.55 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುವೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016-17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016-17ರ ಲೆಕ್ಕಶೀರ್ಷಿಕೆ ಪಿ-0055 ಅಡಿ ಕೊರತೆ ಅನುದಾನ ರೂ. 1.00 ಲಕ್ಷಗಳನ್ನು ಅಳವಡಿಸಿಕೊಂಡು

ಜಾಬ್‌ಸಂಖ್ಯೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

## ***08]. ವಿಷಯದ ಸಂಖ್ಯೆ: ತೆಆಸ್ಥಾಸ/93/2016–17***

ಆಯುಕ್ತರ ದಿನಾಂಕ: 21.11.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮೆ॥. ಹಂಸಲೇಖ ದೇಸಿ ವಿದ್ಯಾಸಂಸ್ಥೆ (ರಿ), ಬೆಂಗಳೂರು ರವರು 2016–17ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಸಂಘ/ಸಂಸ್ಥೆಗಳಿಗೆ ಮಿಸಲಿರಿಸಿದ ಅನುದಾನ ರೂ.500.00 ಲಕ್ಷಗಳ ಪಟ್ಟಿಯಲ್ಲಿ ಕ್ರಮ ಸಂಖ್ಯೆ: 14ರಲ್ಲಿ ರೂ.10.00 ಲಕ್ಷಗಳ ಸಹಾಯಧನವನ್ನು ಬಿಡುಗಡೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಮುಂದುವರೆದಂತೆ 2016–17ನೇ ಸಾಲಿನ ಆಯವಯವ್ಯಯದ ಲೆಕ್ಕಶೀರ್ಷಿಕೆ 24 ಸಂಸ್ಕೃತಿ ಮತ್ತು ಕ್ರೀಡೆ, ಪಿ–048 ಕೊಡುಗೆಗಳು ಮತ್ತು ಸಹಾಯಧನ ಅನುಬಂಧ–2ರ ಕ್ರಮ ಸಂಖ್ಯೆ: 14ರಲ್ಲಿ ಮೆ॥ ಹಂಸಲೇಖ ದೇಸಿ ವಿದ್ಯಾಸಂಸ್ಥೆ (ರಿ), ಬೆಂಗಳೂರು ರವರಿಗೆ ರೂ.10.00 ಲಕ್ಷಗಳ ಅನುದಾನವನ್ನು ನಿಗಧಿ ಮಾಡಲಾಗಿರುತ್ತದೆ.

ತತ್ಸಂಬಂಧವಾಗಿ ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ ಮೆ॥ ಹಂಸಲೇಖ ದೇಸಿ ವಿದ್ಯಾಸಂಸ್ಥೆ (ರಿ), ಬೆಂಗಳೂರು ರವರಿಗೆ ಸಹಾಯಧನ ಮಂಜೂರಾತಿ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಗೆ ಆಯವ್ಯಯದಲ್ಲಿ ಹಂಚಿಕೆ ಮಾಡಲಾಗಿರುವ ರೂ.10.00 (ಹತ್ತು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

## ***09]. ವಿಷಯದ ಸಂಖ್ಯೆ: ತೆಆಸ್ಥಾಸ/94/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 23.11.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 155, ಸ್ವತ್ತಿನ ಸಂಖ್ಯೆ 44 (ಹಳೆಯ ಸಂಖ್ಯೆ 289/24), 4ನೇ ಕ್ರಾಸ್, ಜೆ.ಪಿ. ರಾಜರತ್ನಮ ರಸ್ತೆ, ಹನುಮಂತನಗರ ಇಲ್ಲಿ ಅನಧಿಕೃತ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಅಂದಾಜು ಮೊತ್ತ ರೂ. 18.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ ಬಸವನಗುಡಿ ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ವೆಚ್ಚವನ್ನು 2016–17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳಬೇಕಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

| **ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" Budget Book Page No. 111 (ರೂ. ಲಕ್ಷಗಳಲ್ಲಿ)** | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯಂತೆ ಅನುದಾನ ಅಳವಡಿಸಿಕೊಂಡಿರುವ ಮೊತ್ತ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| **150.00** | **8.00** | **157.45** | **0.55** | **18.00** |

ಜಾಬ್‌ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುವ ಮೊತ್ತ ರೂ. 18.00 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.55 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016-17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016-17ರ ಲೆಕ್ಕಶೀರ್ಷಿಕೆ ಪಿ-0055 ಅಡಿ ಕೊರತೆ ಅನುದಾನ ರೂ. 18.00 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## ***10]. ವಿಷಯದ ಸಂಖ್ಯೆ: ತೆಆಸ್ಥಾಸ/95/2016-17***

ಆಯುಕ್ತರ ದಿನಾಂಕ: 18.11.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರದ ಆರ್ಥಿಕ ಇಲಾಖೆಯ ಆದೇಶದಲ್ಲಿ ರಾಜ್ಯ ಸರ್ಕಾರಿ ನೌಕರರುಗಳಿಗೆ 2012ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ದಿನಾಂಕ: 01-07-2016 ರಿಂದ ಜಾರಿಗೆ ಬರುವಂತೆ ತುಟ್ಟಿಭತ್ಯೆಯ ದರವನ್ನು ಮೂಲ ವೇತನದ ಶೇಕಡ 36 ರಿಂದ ಶೇಕಡ 40.25ಕ್ಕೆ ಹೆಚ್ಚಿಸಿ ಮಂಜೂರು ಮಾಡಲಾಗಿರುತ್ತದೆ.

ಹಾಗೂ ರಾಜ್ಯ ಸರ್ಕಾರದ ನಿವೃತ್ತಿ ವೇತನದಾರರು / ಕುಟುಂಬ ನಿವೃತ್ತಿ ವೇತನದಾರರಿಗೆ ಮತ್ತು ರಾಜ್ಯದ ಸಂಚಿತ ನಿಧಿಯಿಂದ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನವನ್ನು ಪಡೆಯುತ್ತಿರುವಂತಹ ಅನುದಾನಿತ ಶಿಕ್ಷಣ ಸಂಸ್ಥೆಗಳ ನಿವೃತ್ತಿ ವೇತನದಾರರು / ಕುಟುಂಬ ನಿವೃತ್ತಿ ವೇತನದಾರರಿಗೆ ಹಾಲಿ ಲಭ್ಯವಿರುವ ತುಟ್ಟಿಭತ್ಯೆಯ ದರವನ್ನು ಮೂಲ ನಿವೃತ್ತಿ ವೇತನ / ಕುಟುಂಬ ನಿವೃತ್ತಿ ವೇತನದ ಶೇಕಡ 36 ರಿಂದ ಶೇಕಡ 40.25ಕ್ಕೆ ಹೆಚ್ಚಿಸಿ ದಿನಾಂಕ: 01-07-2015 ರಿಂದ ಜಾರಿಗೆ ಬರುವಂತೆ ಮಂಜೂರು ಮಾಡಲಾಗಿರುತ್ತದೆ.

ಸದರಿ ಆದೇಶವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಸಂಬಂಧ ಮುಖ್ಯ ಲೆಕ್ಕಾಧಿಕಾರಿಗಳು ಕಂಡಿಕೆ-(2)ರಲ್ಲಿ "ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 33 ಎಸ್‌ಆರ್‌ಪಿ 2016, ದಿ: 01.01.2016, ರಿಂದ ಜಾರಿಗೆ ಬರುವಂತೆ ಸರ್ಕಾರವು ರಾಜ್ಯ ಸರ್ಕಾರಿ ನೌಕರರಿಗೆ ಅವರ ಮೂಲ ವೇತನದ ಶೇ. 4.25 ರಷ್ಟು ತುಟ್ಟಿಭತ್ಯೆಯನ್ನು ಮಂಜೂರು ಮಾಡಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ 8294 ಖಾಯಂ ಅಧಿಕಾರಿ / ನೌಕರರುಗಳಿಗೆ ಪ್ರಸ್ತುತ ಮಾಹೆಯಾನ ಒಟ್ಟು ಮೂಲ ವೇತನ ರೂ. 12,60,35,224-00 ಗಳನ್ನು ವೆಚ್ಚ ಮಾಡಲಿದ್ದು, ಪಾಲಿಕೆಯ 2016-17ನೇ ಸಾಲಿನ ಆಯವ್ಯಯದಲ್ಲಿ ಸಾಮಾನ್ಯ ಆಡಳಿತ, ವೇತನ ಮತ್ತು ಇತರೇ ವೆಚ್ಚಗಳು ಲೆಕ್ಕಶೀರ್ಷಿಕೆಯಲ್ಲಿ ಶೇ. 4.25 ರಷ್ಟು ಹೆಚ್ಚುವರಿ ತುಟ್ಟಿಭತ್ಯೆಯನ್ನು ಅವಕಾಶ ಮಾಡಿಕೊಳ್ಳುವ ಸಲುವಾಗಿ ಮೇಲ್ಕಂಡ ಸರ್ಕಾರದ ಆದೇಶದನ್ವಯ ದಿನಾಂಕ: 01-07-2015 ರಿಂದ ಜಾರಿಗೆ ಬರುವಂತೆ ಮೂಲ ವೇತನದ ಶೇ. 3.75 ರಷ್ಟು ತುಟ್ಟಿಭತ್ಯೆಯನ್ನು ಪಾಲಿಕೆಯ ಅಧಿಕಾರಿ / ನೌಕರರುಗಳಿಗೆ ನೀಡುವುದರಿಂದ ಮಾಹೆಯಾನ ರೂ. 53,56,497-00 ಗಳು ಅಧಿಕವಾಗಿ ಹೆಚ್ಚಿನ ವೆಚ್ಚವಾಗಲಿದೆ. ಸದರಿ ಪ್ರಸ್ತಾವನೆಯನ್ನು ಮಾನ್ಯ ಆಯುಕ್ತರವರ ಅನುಮೋದನೆಯೊಂದಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸುವ ಬಗ್ಗೆ ಮುಂದಿನ ಕ್ರಮವಹಿಸಬಹುದೆಂದು ತಿಳಿಸಿರುತ್ತಾರೆ."

ಆದುದರಿಂದ ಸರ್ಕಾರದ ಆರ್ಥಿಕ ಇಲಾಖೆಯ ಆದೇಶವನ್ನು ನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 18.11.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *11]. ವಿಷಯದ ಸಂಖ್ಯೆ: ತೆಆಸ್ಥಾಸ/96/2016-17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 24.11.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 150ರ ವ್ಯಾಪ್ತಿಯ ಬೆಳ್ಳಂದೂರು ಗ್ರಾಮದ ಖಾತೆ ಸಂಖ್ಯೆ 1196/1205/1286/32/18 ರಲ್ಲಿ ಅನಧಿಕೃತ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ವೆಚ್ಚ ರೂ. 3.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ ಮಹದೇವಪುರ ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ವೆಚ್ಚವನ್ನು 2016-17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳಬೇಕಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

| **ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" Budget Book Page No. 111 (ರೂ. ಲಕ್ಷಗಳಲ್ಲಿ)** | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯಂತೆ ಅನುದಾನ ಅಳವಡಿಸಿಕೊಂಡಿರುವ ಮೊತ್ತ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| **150.00** | **8.00** | **157.45** | **0.55** | **3.00** |

ಜಾಬ್‌ಸಂಖ್ಯೆ ನೀಡಲು ಪ್ರಸ್ತಾವನೆ ಸಲ್ಲಿಸಿರುವ ಮೊತ್ತ ರೂ. 3.00 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.55 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುವೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016-17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016-17ರ ಲೆಕ್ಕಶೀರ್ಷಿಕೆ ಪಿ-0055 ಅಡಿ ಕೊರತೆ ಅನುದಾನ ರೂ. 3.00 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

*-ಮುಂದೂಡಿದೆ-*

## *12]. ವಿಷಯದ ಸಂಖ್ಯೆ: ತೆಆಸ್ಥಾಸ/97/2016-17*

ಆಯುಕ್ತರ ದಿನಾಂಕ: 21.11.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯು ಸುಮಾರು 800 ಚ.ಮೀ ಮೀರಿದ್ದು, ಪ್ರಸ್ತುತ ಜನಸಂಖ್ಯೆಯು ಸಹ 85 ಲಕ್ಷದಷ್ಟು ಮೀರಿರುತ್ತದೆ. ಅದೇ ರೀತಿ ವಾಹನಗಳ ಸಂಖ್ಯೆಯು ಸಹ 55 ಲಕ್ಷದಷ್ಟಿದ್ದು, ಈ ಕಾರಣದಿಂದ ಹಲವಾರು ಜಂಕ್ಷನ್‌ಗಳಲ್ಲಿ ಟ್ರಾಫಿಕ್ ಜಾಮ್ ಆಗುತ್ತಿರುತ್ತದೆ. ಈ ಪ್ರಮುಖ ಜಂಕ್ಷನ್‌ಗಳಲ್ಲಿ ನೂತನವಾಗಿ ಗ್ರೇಡ್ ಸಪರೇಟರ್ ನಿರ್ಮಾಣದ ಯೋಜನೆಯನ್ನು ನಿರೂಪಿಸಿ ಕಾರ್ಯಗತಗೊಳಿಸಲು ಪಾಲಿಕೆಯ ವತಿಯಿಂದ ಹಲವಾರು ಸಿಗ್ನಲ್ ಮುಕ್ತ ಕಾರಿಡಾರ್ ನಿರ್ಮಾಣದ ಯೋಜನೆ ಕೈಗೆತ್ತಿಕೊಳ್ಳಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ 2012-13ನೇ ಸಾಲಿನ ರಾಜ್ಯ ಆಯವ್ಯಯ ಭಾಷಣದಲ್ಲಿ ಬಿಬಿಎಂಪಿಗೆ ಸುಮಾರು ರೂ. 1618.00 ಕೋಟಿಗಳ ವೆಚ್ಚದಲ್ಲಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದೆಂದು ತೀರ್ಮಾನಿಸಲಾಗಿರುತ್ತದೆ. ಅದರಂತೆ ಮಾನ್ಯ ಆಯುಕ್ತರು ರವರ

ಕಛೇರಿ ಆದೇಶ ಸಂ: ಕಾ.ಪಾ.ಅ/ಯೋ.ಕೇಂ-2/ಪಿ.ಆರ್/04/2015-16 ದಿನಾಂಕ: 13.04.2016ರ ಪತ್ರದಲ್ಲಿ ಪಾಲಿಕೆ ವತಿಯಿಂದ 2012-13ನೇ ಸಾಲಿನಲ್ಲಿ ಮತ್ತು 2013-14ನೇ ಸಾಲಿನಲ್ಲಿ ಭರಿಸಬಹುದಾದ ಯೋಜನಾ ಮೊತ್ತಗಳನ್ನು ನೀಡಲಾಗಿದ್ದು ಇದರಲ್ಲಿ ಮೇಖ್ರಿ ಸರ್ಕಲ್ ನಿಂದ ರಾಷ್ಟ್ರೀಯ ಹೆದ್ದಾರಿ-648 ಅನ್ನು (ತಿರುಮಲಶೆಟ್ಟಿಹಳ್ಳಿ ಹತ್ತಿರ) ಹಳೆ ಮದ್ರಾಸು ರಸ್ತೆ, ಹೋಪ್ ಫಾರಂ ಜಂಕ್ಷನ್ ಮತ್ತು ಚನ್ನಸಂದ್ರ ಮುಖ್ಯ ರಸ್ತೆ ಮಾರ್ಗವಾಗಿ ಸಂಪರ್ಕಿಸುವ ರಸ್ತೆಯನ್ನು ಸಿಗ್ನಲ್ ಮುಕ್ತ ಕಾರಿಡಾರ್‌ನಲ್ಲಿ ಒಟ್ಟು 3 ಪ್ರಮುಖ ಜಂಕ್ಷನ್‌ಗಳಲ್ಲಿ ಗ್ರೇಡ್ ಸೆಪರೇಟರ್ ಹಾಗೂ ಕಾರಿಡಾರ್ ಅಭಿವೃದ್ಧಿ ಕಾಮಗಾರಿಗಳ ಯೋಜನಾ ಮೊತ್ತ ರೂ. 147.95 ಕೋಟಿಗಳಿಗೆ ಯೋಜನೆಯನ್ನು ತಯಾರಿಸಲಾಗಿದ್ದು, ಈ ಯೋಜನಾ ಮೊತ್ತದಲ್ಲಿ 2012-13ನೇ ಸಾಲಿನಲ್ಲಿ ರೂ. 117.00 ಕೋಟಿಗಳು ಹಾಗೂ 2013-14ನೇ ಸಾಲಿನಲ್ಲಿ ರೂ. 30.95 ಕೋಟಿಗಳ ಅವಶ್ಯಕತೆ ಇರುವ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ. ಅದರಂತೆ, ಸರ್ಕಾರಿ ಆದೇಶ ಸಂಖ್ಯೆ: ನಅಇ/356/ಎಂಎನ್‌ವೈ/2012, ದಿನಾಂಕ: 10.07.2012 ರಲ್ಲಿ ರೂ. 147.95 ಕೋಟಿಗಳ ವೆಚ್ಚದಲ್ಲಿ ಈ ಸಿಗ್ನಲ್ ಮುಕ್ತ ಕಾರಿಡಾರಿನ ಯೋಜನೆಗೆ ಸರ್ಕಾರದಿಂದ ತಾತ್ವಿಕ ಅನುಮೋದನೆಯನ್ನು ನೀಡಲಾಗಿರುತ್ತದೆ.

ಪ್ರಸ್ತಾಪಿತ ಸಿಗ್ನಲ್ ಮುಕ್ತ ಕಾರಿಡಾರ್ ಯೋಜನೆಯಲ್ಲಿ ಗ್ರೇಡ್ ಸೆಪರೇಟರ್ ನಿರ್ಮಾಣವನ್ನು ಪ್ರಸ್ತಾವಿಸಲಾಗಿದ್ದು, ಐ.ಟಿ.ಪಿ.ಎಲ್ ಮುಖ್ಯ ರಸ್ತೆಯು ಬೆಂಗಳೂರು ನಗರದ ಪ್ರಮುಖ ರಸ್ತೆಯಾಗಿದ್ದು, ಎಲ್ಲಾ ರೀತಿಯ ಲಘು ಹಾಗೂ ಭಾರಿ ವಾಹನಗಳ ತ್ವರಿತ, ಸುಗಮ, ಸುರಕ್ಷಿತ ವಾಹನ ಸಂಚಾರಕ್ಕಾಗಿ ಮೂರು ಜಂಕ್ಷನ್‌ಗಳಲ್ಲಿ ಗ್ರೇಡ್ ಸೆಪರೇಟರ್‌ಗಳನ್ನು ನಿರ್ಮಿಸಿ ರಸ್ತೆಯನ್ನು ಮೇಲ್ದರ್ಜೆಗೇರಿಸುವುದು ಅವಶ್ಯಕವಾಗಿರುತ್ತದೆ. ದ್ವಿಮುಖ ಸಂಚಾರದ ಎರಡು ಮುಖ್ಯ ರಸ್ತೆಗಳನ್ನೊಳಗೊಂಡ ರಸ್ತೆಯ ಭಾಗವಾಗಿದ್ದು, ಇತ್ತೀಚಿನ ವರ್ಷಗಳಲ್ಲಿ ನಗರೀಕರಣ ಹಾಗೂ ನಗರದ ಎಲ್ಲಾ ಭಾಗಗಳ ಬೆಳವಣಿಗೆಯಿಂದ, ದಿನೇ ದಿನೇ ಏರುತ್ತಿರುವ ವಾಹನಗಳ ಸಂಚಾರದಿಂದ ಈ ರಸ್ತೆ ಭಾಗವೂ ಸಹ ಅತೀವ ವಾಹನ ದಟ್ಟಣೆಗೆ ಒಳಗಾಗಿದೆ.

ಪ್ರಸ್ತಾಪಿತ ರಸ್ತೆ ಭಾಗದಲ್ಲಿ ಸಂಚಾರ ಸಿಗ್ನಲ್ ಚಾಲನೆಯಲ್ಲಿದ್ದು, ಈ ಭಾಗದ ಪೀಕ್‌ಅವರ್ ಪ್ರಸಕ್ತ ಪಿಸಿಯು ಅಧ್ಯಯನದ ಪ್ರಕಾರ 2008 ರಲ್ಲಿ 7285 ಇದ್ದು, ಪ್ರಸ್ತುತ ಶೇ. 10% ರಷ್ಟು ಏರಿಕೆ ಪ್ರಮಾಣವನ್ನು ಪರಿಗಣಿಸಿದರೆ ಸುಮಾರೂ 13000 ಇರುತ್ತದೆ. ಆದ ಕಾರಣ ಹೆಚ್ಚಿದ ವಾಹನ ಸಂಚಾರದಿಂದ ಪೀಕ್‌ಅವರ್‌ಗಳಲ್ಲಿ ಕೆಲವೊಮ್ಮೆ ವಾಹನ ಸಂಚಾರ ಸ್ಥಬ್ದವಾಗುತ್ತಿದೆ. ಇವೆಲ್ಲವನ್ನು ಮನಗಂಡು ಈಗಾಗಲೇ ಮೇಲೆ ವಿವರಿಸಿರುವಂತೆ ಇದೊಂದು ಪ್ರಮುಖ ಆರ್ಟೀರಿಯಲ್ ರಸ್ತೆಯಾಗಿರುತ್ತದೆ. ಮೇಲಿನ ವಾಹನ ಸಂಚಾರ ದಟ್ಟಣೆಯನ್ನು ನಿವಾರಿಸಲು ಗ್ರೇಡ್ ಸೆಪರೇಟರ್ ನಿರ್ಮಾಣಕ್ಕಾಗಿ ಯೋಜನಾ ಸಮಾಲೋಚಕರಾದ ಮೆ॥ ಮಾನಸ ಕನ್ಸಲ್‌ಟೆಂಟ್ಸ್ ಮುಖೇನ ಪ್ರಾಥಮಿಕ ತನಿಖೆ, ಸಮಗ್ರ ಅಧ್ಯಯನದ ನಂತರ ಸುದೀರ್ಘ ಯೋಜನಾ ವರದಿಯನ್ನು ಹಾಗೂ ಅಂದಾಜನ್ನು ತಯಾರಿಸಲಾಗಿದೆ. ಈ ಜಂಕ್ಷನ್‌ನಲ್ಲಿ ದ್ವಿಪಥದ ಎರಡು ದಿಕ್ಕಿನ ಸಂಚಾರವನ್ನೊಳಗೊಂಡ ಗ್ರೇಡ್ ಸೆಪರೇಟರ್‌ನ್ನು ಐ.ಟಿ.ಪಿ.ಎಲ್ ಮುಖ್ಯ ರಸ್ತೆಗೆ ಅಡ್ಡಲಾಗಿ ನಿರ್ಮಿಸಲು ಯೋಜನಾ ವರದಿಯಲ್ಲಿ ಪ್ರಸ್ತಾವಿಸಲಾಗಿ, ಸದರಿ ಸ್ಥಳದ ಮಣ್ಣಿನ ಕ್ಷೇಮಾಧಾರಣ ಸಾಮರ್ಥ್ಯ ಇತ್ಯಾದಿ ಅವಶ್ಯ ವಿನ್ಯಾಸ ಮಾಪನಗಳನ್ನು ಅಳವಡಿಸಿಕೊಳ್ಳಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮಾನ್ಯ ಮುಖ್ಯ ಮಂತ್ರಿಗಳ ನಗರೋತ್ಥಾನ ಅನುದಾನದ ಅಡಿಯಲ್ಲಿ "ಮೇಖ್ರಿ ಸರ್ಕಲ್ ನಿಂದ ರಾಷ್ಟ್ರೀಯ ಹೆದ್ದಾರಿ-648 ಅನ್ನು (ತಿರುಮಲಶೆಟ್ಟಿಹಳ್ಳಿ ಹತ್ತಿರ) ಹಳೆ ಮದ್ರಾಸು ರಸ್ತೆ, ಹೋಪ್ ಫಾರಂ ಜಂಕ್ಷನ್ ಮತ್ತು ಚನ್ನಸಂದ್ರ ಮುಖ್ಯ ರಸ್ತೆ ಮಾರ್ಗವಾಗಿ ಸಂಪರ್ಕಿಸುವ ರಸ್ತೆಯನ್ನು ಸಿಗ್ನಲ್ ಮುಕ್ತ ಕಾರಿಡಾರ್ ಯೋಜನೆಯನ್ನು ರೂ.147.95 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಲಾಗಿರುತ್ತದೆ. ಸದರಿ ಕಾಮಗಾರಿಯನ್ನು

Lumpsum Turnkey ಟೆಂಡರ್ ಆಧಾರದ ಮೇಲೆ ಗುತ್ತಿಗೆದಾರರಾದ ಮೆ॥ ಆರ್.ಎನ್.ಎಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ರವರಿಗೆ ಶೇ.25.27 ರಷ್ಟು ಹೆಚ್ಚುವರಿಯಾಗಿ 2014–15 ದರಗಳಿಗೆ ನೀಡಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಈ ಕಾಮಗಾರಿಯ ಕಾರಿಡಾರ್ ಅಭಿವೃದ್ಧಿ ಕಾಮಗಾರಿಯು ಶೇ.20 ರಷ್ಟು ಪೂರ್ಣಗೊಂಡಿರುತ್ತದೆ ಹಾಗೂ ಸದರಿ ಕಾರಿಡಾರ್‌ನ ಪ್ರಮುಖ ಮೂರು ಜಂಕ್ಷನ್‌ಗಳಾದ ಹೂಡಿ ಜಂಕ್ಷನ್, ಬಿಗ್ ಬಜಾರ್ ರಸ್ತೆ ಜಂಕ್ಷನ್ ಹಾಗೂ ಹೋಪ್ ಫಾರಂ ಜಂಕ್ಷನ್ ಗಳಲ್ಲಿ ದ್ವಿಮುಖ ಸಂಚಾರದ ಗ್ರೇಡ್ ಸಪರೇಟರ್‌ಗಳನ್ನು ನಿರ್ಮಾಣ ಮಾಡಲು ಯೋಜಿಸಲಾಗಿದೆ. ಈ ಗ್ರೇಡ್ ಸಪರೇಟರ್‌ಗಳ ಪೈಕಿ ಪ್ರಸ್ತಾಪಿತ ಹೋಪ್ ಫಾರಂ ಜಂಕ್ಷನ್‌ನಲ್ಲಿ ಅಂಡರ್‌ಪಾಸ್ ನಿರ್ಮಾಣಕ್ಕಾಗಿ ಬೇಕಾಗುವ ಭೂಮಿಯನ್ನು ಸ್ವಾಧಿನಪಡಿಸಿಕೊಳ್ಳುವ ಸಲುವಾಗಿ ಸರ್ವೇಯರ್ ಅವರಿಂದ ಮೋಜಣಿ ಮಾಡಿಸಿ ಭೂಸ್ವಾಧೀನಗೊಳ್ಳುವ ಹಿಡುವಳಿದಾರರ/ ಸ್ವತ್ತುಗಳ ಪಟ್ಟಿಯನ್ನು ಸಿದ್ದಪಡಿಸಿ ಒಟ್ಟು 19 ಆಸ್ತಿಗಳ ಮಾಲೀಕರಿಗೆ ಟಿ.ಡಿ.ಆರ್‌ನ ತಿಳುವಳಿಕೆ ಪತ್ರಗಳನ್ನು ನೀಡಲಾಗಿರುತ್ತದೆ. ಆಸ್ತಿ ಮಾಲೀಕರುಗಳಿಗೆ ನೀಡಿರುವ ಟಿ.ಡಿ.ಆರ್ ಅರ್ಜಿ ಹಾಗೂ ನೋಟೀಸ್‌ಗಳ ವಿವರ ಹಾಗೂ ಪ್ರತಿಗಳನ್ನು ಜಂಟಿ ಆಯುಕ್ತರು (ಮಹದೇವಪುರ) ರವರಿಗೆ ಸಲ್ಲಿಸಿ ಟಿ.ಡಿ.ಆರ್ ನೀಡುವ ಕುರಿತು ಮುಂದಿನ ಕ್ರಮ ಕೈಗೊಳ್ಳುವಂತೆ ಕೋರಲಾಗಿರುತ್ತದೆ. ಮುಂದುವರೆದು ಆಸ್ತಿ ಮಾಲೀಕರು ಟಿ.ಡಿ.ಆರ್ ಅನ್ವಯ ಭೂಸ್ವಾಧೀನಕ್ಕೆ ಸಿದ್ಧವಿರುವುದಿಲ್ಲವೆಂದು ಮೌಖಿಕವಾಗಿ ತಿಳಿಸಿರುತ್ತಾರೆ.

ದಿನಾಂಕ: 22.01.2016 ರಂದು ನಡೆದ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಗ್ರೇಡ್ ಸಪರೇಟರ್‌ಗಳಿಗೆ ಅವಶ್ಯವಿರುವ ಸ್ವತ್ತುಗಳನ್ನು ಖರೀದಿಸಲು ಯೋಜಿಸಿದ್ದು, ಪಾಲಿಕೆಯಲ್ಲಿ ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿರುವುದರಿಂದ ಸರ್ವಿಸ್ ರಸ್ತೆಗಳನ್ನು ಸಧ್ಯಕ್ಕೆ 5.50 ಮತ್ತು 7.50 ಮೀ. (ಐ.ಆರ್.ಸಿ ರೀತ್ಯಾ ಮಧ್ಯಂತರ ಲೇನ್ ಅಥವಾ ಎರಡು ಲೇನ್) ಅಗಲದಿಂದ 3.50 ಮೀ. (ಐ.ಆರ್.ಸಿ ರೀತ್ಯಾ ಒಂದು ಲೇನ್) ಅಗಲದ ರಸ್ತೆಯನ್ನು ಮತ್ತು 1.50 ಮೀ. ಅಗಲದ ಪಾದಚಾರಿ ಮಾರ್ಗ / ಮಳೆ ನೀರು ಚರಂಡಿ ಸಹಿತ ಅಭಿವೃದ್ಧಿ ಪಡಿಸಲು ತೀರ್ಮಾನಿಸಲಾಗಿದ್ದು, ಭೂಸ್ವಾಧೀನ ಪ್ರಸ್ತಾವನೆ ಸಲ್ಲಿಸಲು ಸೂಚಿಸ`ಲಾಗಿರುತ್ತದೆ. ಇದರಂತೆ ಈ ಗ್ರೇಡ್ ಸಪರೇಟರ್‌ಗಳಿಗೆ ಭೂಸ್ವಾಧೀನಕ್ಕೆ ಬೇಕಾಗಿರುವ ಮೊತ್ತವನ್ನು ಸರ್ಕಾರದಿಂದ ಭರಿಸಲು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ರವರಿಗೆ ಮಾನ್ಯ ಆಯುಕ್ತರು ಪತ್ರ ಸಂಖ್ಯೆ:ಆಯುಕ್ತರು/ಪಿ.ಆರ್/2675/2015–16 ದಿನಾಂಕ: 05.03.2016 ರಲ್ಲಿ ಕೋರಿರುತ್ತಾರೆ.

ಮುಂದುವರೆದು ಈ ಗ್ರೇಡ್ ಸಪರೇಟರ್‌ಗಳ ನಿರ್ಮಾಣ ಯೋಜನೆಗಳಿಗೆ ಬೇಕಾಗಿರುವ ಸ್ವತ್ತುಗಳನ್ನು ಭೂಸ್ವಾಧೀನ ಮಾಡಿಕೊಳ್ಳ ಭೂಸ್ವಾಧೀನ ಕಾಯ್ದೆ ಅಧಿನಿಯಮ–2013 ರಂತೆ ಕಾರ್ಯ ನಡೆಸಿ ಸ್ವತ್ತನ್ನು ಪಡೆದುಕೊಳ್ಳಲು ಬಹು ಸಮಯವಾಗುವುದರಿಂದ ಮಾನ್ಯ ಆಯುಕ್ತರು ರವರು ಪತ್ರ ಸಂಖ್ಯೆ: ಕಾ.ಪಾ.ಅ/ಯೋ.ಕೇಂ–2/ಪಿ.ಆರ್/04/2015–16 ದಿನಾಂಕ: 13.04.2016 ರಲ್ಲಿ ಕಛೇರಿ ಆದೇಶ ನೀಡಿ ಕೆ.ಎಂ.ಸಿ ಕಾಯ್ದೆ 1976ರ ಸೆಕ್ಷನ್ 175 ರಂತೆ ಬೇಕಾಗಿರುವ ಖರೀದಿಸಲು ಕೇಂದ್ರ ಸಮಿತಿಯನ್ನು ರಚಿಸಲಾಗಿರುತ್ತದೆ.

ಈ ಕಾರಿಡಾರ್‌ನ ಭಾಗವಾದ ಹೋಪ್ ಫಾರಂ ಜಂಕ್ಷನ್ ನಲ್ಲಿ ನಿರ್ಮಿಸಬೇಕಾಗಿರುವ ದ್ವಿಪಥದ ಕೆಳಸೇತುವೆಯ ವಿವರ ಕೆಳಕಂಡಿರುತ್ತದೆ.

<u>ಹೋಪ್ ಫಾರಂ ರಸ್ತೆ ಜಂಕ್ಷನ್‌ನಲ್ಲಿ ಗ್ರೇಡ್ ಸೆಪರೇಟರ್ ನಿರ್ಮಾಣ:</u>

| | |
|---|---|
| ಗ್ರೇಡ್ ಸೆಪರೇಟರ್ ಉದ್ದ (Underpass) | 355.00 ಮೀ. |
| ಗ್ರೇಡ್ ಸೆಪರೇಟರ್ ಅಪ್ರೋಚ್‌ಸ್ (Towards Vartur) ಉದ್ದ | 201.37 ಮೀ. |
| ಗ್ರೇಡ್ ಸೆಪರೇಟರ್ ಅಪ್ರೋಚ್‌ಸ್ (Towards Kadugodi) ಉದ್ದ | 88.44 ಮೀ. |
| ಗ್ರೇಡ್ ಸೆಪರೇಟರ್ ಒಟ್ಟು ಅಗಲ | 7.5 ಮೀ (ಪ್ರತಿ ದಿಕ್ಕಿನಲ್ಲಿ) (Two way, Bi- |

| | |
|---|---|
| | Directional 7.5 Carriage Way on either side) |
| ಗ್ರೇಡ್ ಸೆಪರೇಟರ್ ಲಂಬ ಕ್ಲಿಯರೆನ್ಸ್ | 5.5 ಮೀ. |
| ಲೇನ್‌ಗಳ ಸಂಖ್ಯೆ | 4 ಸಂಖ್ಯೆ |
| ಶೃಂಗ ವಾಟ | 5% (1 in 20) |
| ಸೇವಾ ರಸ್ತೆಯ ಅಗಲ | 3.5 ಮೀ. |
| ಪಾದಚಾರಿ ರಸ್ತೆಯ ಅಗಲ | 1.5 ಮೀ. (ಪಾದಚಾರಿ ಮಾರ್ಗ / ಮಳೆ ನೀರು ಚರಂಡಿ ಸಹಿತ) |
| ತಡೆಗೋಡೆ ಉದ್ದ | 201.37 ಮೀ. + 88.44 ಮೀ. ಆರ್.ಸಿ.ಸಿ. ರಿಟೈನಿಂಗ್ ವಾಲ್ |
| ಭೂಸ್ವಾಧೀನ Area (approximate) | 1776.00 ಚ.ಮೀ. |

ಸದರಿ ಅಂಡರ್‌ಪಾಸ್‌ನ ಎರಡೂ ಬದಿಯಲ್ಲೂ ಖಾಸಗಿ ಭೂಮಿಯು ಅವಶ್ಯವಿರುತ್ತದೆ. ಭೂಸ್ವಾಧೀನಕ್ಕಾಗಿ ಮೇಲೆ ಉಲ್ಲೇಖಿಸಿರುವ ಕೇಂದ್ರ ಸಮಿತಿಯು ಹಾಗೂ ಭೂಮಾಲೀಕರೊಂದಿಗೆ ಸಭೆ ನಡೆಸಿ ದಿನಾಂಕ: 21.06.2016 ರಂದು ನಡೆದ ಸಭೆಯಲ್ಲಿ ಭೂಮಾಲೀಕರಿಗೆ ತಾವು ಗ್ರೇಡ್ ಸಪರೇಟರ್‌ಗೆ ಬಿಟ್ಟುಕೊಡುವ ಭೂಮಿಗೆ ಮಾರ್ಗದರ್ಶಿ ದರ ಹಾಗೂ ಶೇ.63.33 ರಷ್ಟು ಹೆಚ್ಚುವರಿ ಅಧಿಕ ಮೊತ್ತವನ್ನು ನೀಡಲು ನಿರ್ಣಹಿಸಲಾಗಿದೆ. ಹಾಗೂ ಇದರಂತೆ ಮಾರ್ಗದರ್ಶಿ ಬೆಲೆಯು ಸರ್ಕಾರದ ಆದೇಶ ಸಂಖ್ಯೆ: ಸಿ.ವಿ.ಸಿ/25/2014–15, ಬೆಂಗಳೂರು ದಿನಾಂಕ:28.03.2016 ರಂತೆ ಸದರಿ ಸ್ಥಳದಲ್ಲಿ ಪ್ರತಿ ಚದರ ಅಡಿಗೆ ರೂ.4440.00 ನಿಗಧಿಯಾಗಿದ್ದು, ಶೇ.63.33 ರಂತೆ ಹೆಚ್ಚುವರಿ ದರ ನೀಡಿದಲ್ಲಿ ಭೂಮಾಲೀಕರಿಗೆ ರೂ.7187.00 ಪ್ರತಿ ಚ.ಅಡಿಗೆ ನೀಡಬೇಕಿರುತ್ತದೆ.

ಪ್ರಸ್ತುತ ಸದರಿ ಗ್ರೇಡ್ ಸಪರೇಟರ್‌ಗಾಗಿ ಖಾಸಗಿ ಭೂಮಿಗಳ ಭೂಸ್ವಾಧೀನ ಮಾಡಿಕೊಳ್ಳುವುದು ಅವಶ್ಯವಿದ್ದು, ಸದರಿ ಸ್ವತ್ತುಗಳು ವಿವರ ಕೆಳ ಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಗ್ರಾಮದ ಹೆಸರು | ಮಾಲೀಕರುಗಳ ಹೆಸರು | ಭೂಸ್ವಾಧೀನಕ್ಕೆಬೇಕಾದ ಸ್ವತ್ತಿನ ವಿಸ್ತೀರ್ಣ |
|---|---|---|---|
| 1 | ಪಟ್ಟಂದೂರು ಅಗ್ರಹಾರ | ಮೆ॥ ಕ್ರಸ್ಟೆಲ್ಲಾ ಓನರ್ಸ್ ಅಸೋಸಿಯೇಶನ್<br>ಪಾಲಿಕೆ ಖಾತೆ ಸಂಖ್ಯೆ: 206, ವೈಟ್ ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು. | 8.68 ಚ.ಮೀ.<br>93.43 ಚ.ಅ. |
| 2 | ಪಟ್ಟಂದೂರು ಅಗ್ರಹಾರ | ಶ್ರೀ. ಝಕರಿಯಾ ನಬಿಲ್ ಕೋಶಿ<br>ಪಾಲಿಕೆ ಖಾತೆ ಸಂಖ್ಯೆ: 8/1, ವೈಟ್ ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು. | 29.73 ಚ.ಮೀ.<br>320.01 ಚ.ಅ. |
| 3 | ಪಟ್ಟಂದೂರು ಅಗ್ರಹಾರ | ಶ್ರೀ. ಕೋಶಿ ಝಕರಿಯಾ<br>ಪಾಲಿಕೆ ಖಾತೆ ಸಂಖ್ಯೆ: 169/148/8, ವೈಟ್ ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು. | 30.00 ಚ.ಮೀ.<br>323.00 ಚ.ಅ. |
| 4 | ಪಟ್ಟಂದೂರು ಅಗ್ರಹಾರ | ಶ್ರೀ. ಪಿ.ಜೆ.ರೆ.ಸಿಂಗ್<br>ಪಾಲಿಕೆ ಖಾತೆ ಸಂಖ್ಯೆ: 88, ವೈಟ್ ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು. | 319.45 ಚ.ಮೀ.<br>3438.53 ಚ.ಅ. |
| 5 | ಪಟ್ಟಂದೂರು ಅಗ್ರಹಾರ | ಶ್ರೀಮತಿ. ಸಿ.ಎಂ.ಸಿಕ್ವೇರ್ಯ / ಎರಿಕ್ ಆಶ್ಲೆ<br>ಪಾಲಿಕೆ ಖಾತೆ ಸಂಖ್ಯೆ: 8/8, ವೈಟ್ ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು. | 11.12 ಚ.ಮೀ.<br>120.55 ಚ.ಅ. |
| 6 | ಪಟ್ಟಂದೂರು ಅಗ್ರಹಾರ | ಮೆ॥ ಶ್ರೇನೊ ಲಿಮಿಟೆಡ್ (ಮೆ॥ ಅಲಂಬಿಕ್ ಗ್ಲಾಸ್ ಇಂಡಸ್ಟ್ರೀಸ್ ಲಿ)<br>ಪಾಲಿಕೆ ಖಾತೆ ಸಂಖ್ಯೆ: 57/67, ವೈಟ್ ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು. | 52.24 ಚ.ಮೀ.<br>562.30 ಚ.ಅ. |
| 7 | ಪಟ್ಟಂದೂರು ಅಗ್ರಹಾರ | ಶ್ರೀ. ಪಿ.ಸಿ. ದಿಲೀಪ್ ಕುಮಾರ್, ಪಿ.ಸಿ.ಗುರುಭರನ್, ಪಿ.ಸಿ.ಶ್ರೀಧರನ್<br>ಪಾಲಿಕೆ ಖಾತೆ ಸಂಖ್ಯೆ: 41, ವೈಟ್ ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು | 3.19 ಚ.ಮೀ.<br>34.33 ಚ.ಅ. |
| 8 | ಪಟ್ಟಂದೂರು ಅಗ್ರಹಾರ | ಶ್ರೀ. ಪಿ.ಸಿ. ದಿಲೀಪ್ ಕುಮಾರ್, ಪಿ.ಸಿ.ಗುರುಭರನ್, ಪಿ.ಸಿ.ಶ್ರೀಧರನ್<br>ಪಾಲಿಕೆ ಖಾತೆ ಸಂಖ್ಯೆ: 41, ವೈಟ್ ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು | 42.32 ಚ.ಮೀ.<br>455.52 ಚ.ಅ. |
| 9 | ಪಟ್ಟಂದೂರು ಅಗ್ರಹಾರ | ಶ್ರೀಮತಿ ಬಿಂದುರಾಣಿ W/o ಯರೇಶಾಮಿ<br>ಪಾಲಿಕೆ ಖಾತೆ ಸಂಖ್ಯೆ: 937/147, ವೈಟ್ ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು. | 56.46 ಚ.ಮೀ.<br>607.73 ಚ.ಅ. |
| 10 | ಪಟ್ಟಂದೂರು ಅಗ್ರಹಾರ | ಶ್ರೀ. ಜಕ್ಕಾ ವಿನೋದ್ ರೆಡ್ಡಿ<br>ಪಾಲಿಕೆ ಖಾತೆ ಸಂಖ್ಯೆ: 41, ವೈಟ್ ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು. | 319.67 ಚ.ಮೀ.<br>3440.89 ಚ.ಅ. |
| 11 | ಪಟ್ಟಂದೂರು ಅಗ್ರಹಾರ | ಶ್ರೀ. ಪಿ.ಸಿ.ಶ್ರೀಧರನ್, ಪಿ.ಸಿ.ಗುರುಭರನ್<br>ಪಾಲಿಕೆ ಖಾತೆ ಸಂಖ್ಯೆ: 40/1, ವೈಟ್ ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು. | 410.32 ಚ.ಮೀ.<br>4416.64 ಚ.ಅ. |
| 12 | ಪಟ್ಟಂದೂರು ಅಗ್ರಹಾರ | ಮೆ॥ ಎನ್.ಎ.ಕೆ (ಪಿ.ಸಿ.ಶ್ರೀಧರನ್, ಪಿ.ಸಿ.ಗುರುಭರನ್)<br>ಪಾಲಿಕೆ ಖಾತೆ ಸಂಖ್ಯೆ: 40/2, ವೈಟ್ ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು. | 193.36 ಚ.ಮೀ.<br>2081.30 ಚ.ಅ. |
| 13 | ಪಟ್ಟಂದೂರು ಅಗ್ರಹಾರ | ಅಧ್ಯಕ್ಷರು, ದಿವ್ಯ ಜ್ಯೋತಿ ಡಿವೈನ್ ಲೈಟ್ ಟ್ರಸ್ಟ್ ಫಾರ್ ದಿ ಬ್ಲೈಂಡ್<br>ಪಾಲಿಕೆ ಖಾತೆ ಸಂಖ್ಯೆ: 227, (ಸರ್ವೇ ನಂ. 34/2 ಮತ್ತು 33)<br>ವೈಟ್ ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು. | 271.68 ಚ.ಮೀ.<br>2924.33 ಚ.ಅ. |
| 14 | ಪಟ್ಟಂದೂರು | ಶ್ರೀ. ಗಫಾರ್ ಬೇಗ್ S/o ಲೇ. ಅಸಾದುಲ್ಲಾ ಬೇಗ್ | 271.68 ಚ.ಮೀ. |

| | | | |
|---|---|---|---|
| | ಅಗ್ರಹಾರ | ಪಾಲಿಕೆ ಖಾತೆ ಸಂಖ್ಯೆ: 227, (ಸರ್ವೇ ನಂ. 34/2 ಮತ್ತು 33) ವೈಟ್ ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು. | 2924.33 ಚ.ಅ. |
| 15 | ಪಟ್ಟಂದೂರು ಅಗ್ರಹಾರ | ಶ್ರೀ. ಸೋಮಶೇಖರ್–ಮುಳಗುಂದ ಪಾಲಿಕೆ ಖಾತೆ ಸಂಖ್ಯೆ: 278 (ಸರ್ವೇ ನಂ. 32), ವೈಟ್ ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು. | 4.49 ಚ.ಮೀ. 48.32 ಚ.ಅ. |

ಮೇಲ್ಕಂಡ ಭೂಸ್ವಾಧೀನ ವಿವರಗಳು ಪ್ರಸ್ತುತ ಲಭ್ಯವಿರುವ ದಾಖಲೆಗಳಂತೆ ತಯಾರಿಸಲಾಗಿದೆ. ಈ ಗ್ರೇಡ್ ಸಪರೇಟರ್ ನಿರ್ಮಾಣಕ್ಕೆ ಒಟ್ಟು 1776.00 ಚ.ಮೀ ಅಥವಾ 19110.00 ಚ.ಅಡಿ ಭೂಸ್ವಾಧೀನ ಮಾಡಿಕೊಳ್ಳಬೇಕಾಗಿದ್ದು, ಭೂಸ್ವಾಧೀನ ವೆಚ್ಚವು ಸಮಿತಿಯ ಶಿಫಾರಸ್ಸಿನಂತೆ ರೂ. 7187.00 ಪ್ರತಿ ಚ.ಅಡಿ ಯಂತೆ ರೂ. 13.75 ಕೋಟಿಗಳಾಗಿದ್ದು, ಭೂಮಾಲೀಕರು ವಾಣಿಜ್ಯ ಪ್ರದೇಶಕ್ಕೆ ಭೂಸ್ವಾಧೀನ ಕಾಯ್ದೆ ಪ್ರಕಾರ ಅಥವಾ ಸರ್ಕಾರದ ಮಾರ್ಗದರ್ಶಿ ದರಗಳಂತೆ ಪ್ರತ್ಯೇಕವಾಗಿ ನೀಡಲು ಕೋರಿದ್ದು, ಸಮಿತಿಯು ನಿಯಮಾನುಸಾರ ನೀಡಲು ಒಪ್ಪಿರುತ್ತಾರೆ. ಈ ಅಧಿಕ ವೆಚ್ಚವನ್ನು ಸಹ ಭೂಮಾಲೀಕರುಗಳಿಗೆ ನೀಡಬೇಕಾಗಿದ್ದು, ಪಾಲಿಕೆಯ ಭೂಸ್ವಾಧೀನ ಇಲಾಖೆ ವತಿಯಿಂದ ನಿಯಮಾನುಸಾರ ನೀಡಬೇಕಾಗಿರುತ್ತದೆ. ಹಾಗೂ 2013 ರ ಭೂಸ್ವಾಧೀನ ಕಾಯ್ದೆ ಪ್ರಕಾರ ಭೂ ಪರಿಹಾರ ಹಾಗೂ ಭೂಮಾಲೀಕರು ಕೋರಿರುವ ಒಟ್ಟು ಭೂಪರಿಹಾರ ವಿವರಗಳ ತುಲನಾತ್ಮಕ ಪಟ್ಟಿ ಕೆಳಕಂಡಂತಿರುತ್ತದೆ.

| ಕ್ರ.ಸಂ | ಖಾಸಗಿ ಭೂಮಾಲೀಕರ ಹೆಸರು | ನಿವೇಶನದ ವಿಸ್ತೀರ್ಣ ಚ.ಅಡಿ. ಗಳಲ್ಲಿ | 01.04.2016 ರ ನೋಂದಣಾಧಿಕಾರಿಗಳ ಮಾರ್ಗಸೂಚಿ ಬೆಲೆಯಂತೆ ಒಟ್ಟು ಭೂ ಪರಿಹಾರ ಮೊತ್ತ (ರೂ. 4440/ ಚ.ಅಡಿಗೆ) | 2013 ರ ಭೂಸ್ವಾಧೀನ ಕಾಯ್ದೆಯಂತೆ ಒಟ್ಟು ಭೂಪರಿಹಾರ ಮೊತ್ತ (ರೂ. 8880/ಚ.ಅಡಿಗೆ) | ಭೂಮಾಲೀಕರು ಕೋರಿರುವ ಒಟ್ಟು ಭೂ ಪರಿಹಾರ ಮೊತ್ತ (ರೂ.7187/ಚ.ಅಡಿಗೆ) | 2013 ರ ಭೂಸ್ವಾಧೀನ ಕಾಯ್ದೆ ಮತ್ತು ಭೂಮಾಲೀಕರು ಕೋರಿರುವ ಮೊತ್ತಕ್ಕೆ ಹೋಲಿಸಿದಾಗ ಪಾಲಿಕೆಗೆ ಉಳಿತಾಯವಾಗುವ ಮೊತ್ತ |
|---|---|---|---|---|---|---|
| 1 | ಮೆ॥ ಕ್ರಸ್ಟೆಲ್ಲಾ ಓನರ್ಸ್ ಅಸೋಸಿಯೇಶನ್ | 93.43 | 414829.20 | 829658.40 | 671481.41 | 158176.99 |
| 2 | ಶ್ರೀ. ಝುಕರಿಯಾ ನಬಿಲ್ ಕೋಶಿ | 320.01 | 1420844.40 | 2841688.80 | 2299911.87 | 541776.93 |
| 3 | ಶ್ರೀ. ಕೋಶಿ ಝುಕರಿಯಾ | 323.00 | 1434120.00 | 2868240.00 | 2321401.00 | 546839.00 |
| 4 | ಶ್ರೀ. ಪಿ.ಜೆ.ರೆ.ಸಿಂಗ್ | 3438.53 | 15267073.20 | 30534146.40 | 24712715.11 | 5821431.29 |
| 5 | ಶ್ರೀಮತಿ. ಸಿ.ಎಂ.ಸಿಕ್ವೇರ್ಯ / ಎರಿಕ್ ಆಶ್ಲೆ | 120.55 | 535242.00 | 1070484.00 | 866392.85 | 204091.15 |
| 6 | ಮೆ॥ ಶ್ರೇನೊ ಲಿಮಿಟೆಡ್ (ಮೆ॥ ಅಲಂಬಿಕ್ ಗ್ಲಾಸ್ ಇಂಡಸ್ಟ್ರೀಸ್ ಲಿ) | 562.30 | 2496612.00 | 4993224.00 | 4041250.10 | 951973.90 |
| 7 | ಶ್ರೀ. ಪಿ.ಸಿ. ದಿಲೀಪ್ ಕುಮಾರ್, ಪಿ.ಸಿ.ಗುರುಭರನ್, ಪಿ.ಸಿ.ಶ್ರೀಧರನ್ | 34.33 | 152425.20 | 304850.40 | 246729.71 | 58120.69 |
| 8 | ಶ್ರೀ. ಪಿ.ಸಿ. ದಿಲೀಪ್ ಕುಮಾರ್, ಪಿ.ಸಿ.ಗುರುಭರನ್, ಪಿ.ಸಿ.ಶ್ರೀಧರನ್ | 455.52 | 2022508.80 | 4045017.60 | 3273822.24 | 771195.36 |
| 9 | ಶ್ರೀಮತಿ ಬಿಂದುರಾಣಿ W/o ಯರೇಶಾಮಿ | 607.73 | 2698321.20 | 5396642.40 | 4367755.51 | 1028886.89 |
| 10 | ಶ್ರೀ. ಜಕ್ಕಾ ವಿನೋದ್ ರೆಡ್ಡಿ | 3440.89 | 15277551.60 | 30555103.20 | 24729676.43 | 5825426.77 |
| 11 | ಶ್ರೀ. ಪಿ.ಸಿ.ಶ್ರೀಧರನ್, ಪಿ.ಸಿ.ಗುರುಭರನ್ | 4416.64 | 19609881.60 | 39219763.20 | 31742391.68 | 7477371.52 |
| 12 | ಮೆ॥ ಎನ್.ಎ.ಕೆ (ಪಿ.ಸಿ.ಶ್ರೀಧರನ್, ಪಿ.ಸಿ.ಗುರುಭರನ್) | 2081.30 | 9240972.00 | 18481944.00 | 14958303.10 | 3523640.90 |

| | | | | | | |
|---|---|---|---|---|---|---|
| 13 | ಅಧ್ಯಕ್ಷರು, ದಿವ್ಯ ಜ್ಯೋತಿ ಡಿವೈನ್ ಲೈಟ್ ಟ್ರಸ್ಟ್ ಫಾರ್ ದಿ ಬ್ಲೈಂಡ್ | 1462.16 | 6491990.40 | 12983980.80 | 10508543.92 | 2475436.88 |
| 14 | ಶ್ರೀ. ಗಫಾರ್ ಬೇಗ್ S/o ಲೇ. ಅಸಾದುಲ್ಲಾ ಬೇಗ್ | 1462.16 | 6491990.40 | 12983980.80 | 10508543.92 | 2475436.88 |
| 15 | ಶ್ರೀ. ಸೋಮಶೇಖರ್– ಮುಳಗುಂದ | 48.32 | 214540.80 | 429081.60 | 347275.84 | 81805.76 |
| | ಒಟ್ಟು | 1776.00 | 83768902.80 | 167537805.60 | 135596194.69 | 31941610.91 |

ಸದರಿ ಭೂ ಪರಿಹಾರ ಮೊತ್ತವಾದ ರೂ. 13.56 ಕೋಟಿಗಳು ಹಾಗೂ ಭೂಸ್ವಾಧೀನವಾಗುವ ವಾಣಿಜ್ಯೇತರ ಪ್ರದೇಶಗಳಿಗೆ ಹೆಚ್ಚುವರಿ ಮೊತ್ತವನ್ನು ಈ ಕೆಳಕಂಡ ಕಾರಣಗಳಿಗೆ ಅನಿವಾರ್ಯವಾಗಿರುತ್ತದೆ.

1. ಹೋಪ್ ಫಾರಂ ಜಂಕ್ಷನ್ ನಲ್ಲಿ ಸಿಗ್ನಲ್ ಮುಕ್ತ ಕಾರಿಡಾರ್ ಅನ್ವಯ ಜಂಕ್ಷನ್ ಅನ್ನು ಸಿಗ್ನಲ್ ಮುಕ್ತ ಮಾಡಲು ಕೆಳಸೇತುವೆ ನಿರ್ಮಾಣ ಮಾಡುವುದು ಅನಿವಾರ್ಯವಾಗಿರುತ್ತದೆ.
2. ಈಗಾಗಲೇ ಕಾರಿಡಾರ್‌ನ ಕಾಮಗಾರಿಯು ಶೇ.20 ರಷ್ಟು ಪೂರ್ಣಗೊಂಡಿದ್ದು, ಹಾಗೂ ಕಾಮಗಾರಿಯನ್ನು ಪೂರ್ಣಗೊಳಿಸಲು ಪ್ರಶ್ನಿತ ಜಾಗವು ಅನಿವಾರ್ಯವಾದ್ದರಿಂದ ಭೂಸ್ವಾಧೀನ ಪಡಿಸಿಕೊಳ್ಳಲೆ ಬೇಕಾಗಿರುತ್ತದೆ.
3. ಸದರಿ ಅಂಡರ್‌ಪಾಸ್ ನಿರ್ಮಾಣ ಸಂಬಂಧ ಸದರಿ ಜಾಗದ ಸ್ವತ್ತುಗಳನ್ನು ಭೂಸ್ವಾಧೀನ ಪಡೆಸಿದಲ್ಲಿ, ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಬಹುದಾಗಿದೆ.
4. ಹೊಸ ಭೂಸ್ವಾಧೀನ ಕಾಯ್ದೆ 2013 ರ ರೀತಿಯಲ್ಲಿ ಭೂಸ್ವಾಧೀನ ವೆಚ್ಚವು ದುಬಾರಿಯಾಗುವ ಹಿನ್ನಲೆಯಲ್ಲಿ ಕೆ.ಎಂ.ಸಿ ಕಾಯ್ದೆ 1976 ಸೆಕ್ಷನ್ 175 ರ ಅಡಿಯಲ್ಲಿ ಭೂಮಿಯನ್ನು ನೇರ ಖರೀದಿ ಮಾಡಲು ಉದ್ದೇಶಿಸಲಾಗಿದ್ದು, ಸಾರ್ವಜನಿಕರ ಹಿತದೃಷ್ಠಿಯಿಂದ ಭೂಸ್ವಾಧೀನವನ್ನು ಪಡಿಸಿಕೊಳ್ಳಲೆ ಬೇಕಾಗಿರುತ್ತದೆ.
5. ಖಾಸಗಿ ಭೂಮಾಲೀಕರೊಂದಿಗೆ ಅಂತಿಮಗೊಳಿಸುವ ಮೊತ್ತವು 2013ರ ಭೂಸ್ವಾಧೀನ ಕಾಯ್ದೆಗಿಂತಲೂ ಕಡಿಮೆ ಇದ್ದು, ಕಾಮಗಾರಿಯನ್ನು ನಿರ್ಧಿಷ್ಠ ಅವಧಿಯಲ್ಲಿ ಪೂರ್ಣಗೊಳಿಸಲು ಅನುವುಮಾಡಿಕೊಡುತ್ತದೆ.
6. ಕಾಮಗಾರಿಯನ್ನು ಈಗಾಗಲೇ ಪ್ರಾರಂಭಿಸಿ ಒಂದು ವರ್ಷಗಳಾಗಿರುವುದರಿಂದ ಮತ್ತು ಈ ಜಂಕ್ಷನ್‌ನಲ್ಲಿ ವಾಹನ ಸಂಚಾರದ ದಟ್ಟಣೆಯು ಅಧಿಕವಾಗಿರುವುದರಿಂದ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಹಾಗೂ ಕಾಮಗಾರಿ ವಿಳಂಭವಾಗಿರುವ ಬಗ್ಗೆ ದೂರುಗಳು ಬರಲಾರಂಭಿಸಿರುವುದರಿಂದ ಶೀಘ್ರದಲ್ಲಿ ನಿರ್ಧಾರ ಕೈಗೊಳ್ಳಬೇಕಾಗಿದೆ.

ಸದರಿ ಕೇಂದ್ರ ಸಮಿತಿಯಲ್ಲಿ ನಿರ್ಣಹಿಸಿದಂತೆ ಖಾಸಗಿ ಭೂಮಾಲೀಕರು ಕೋರಿರುವ ರೂ.13.55 ಕೋಟಿಗಳು ಹಾಗೂ ಭೂಸ್ವಾಧೀನವಾಗುವ ವಾಣಿಜ್ಯೇತರ ಪ್ರದೇಶಗಳಿಗೆ ಹೆಚ್ಚುವರಿ ಮೊತ್ತವನ್ನು ಬಿಡುಗಡೆ ಮಾಡಿಕೊಡಬೇಕೆಂದು ಸಮಿತಿಯನ್ನು ಕೋರಿದ್ದು, ಕೆ.ಎಂ.ಸಿ ಕಾಯ್ದೆ 1976 ಸೆಕ್ಷನ್ 175 ರಂತೆ ಖಾಸಗಿ ಭೂಮಾಲೀಕರಿಂದ ನೇರವಾಗಿ ಭೂ ಖರೀದಿ ಮಾಡಲು ಅನುಮೋದನೆ ನೀಡುವ ಅಧಿಕಾರವು ಘನ ಸರ್ಕಾರದ ಕಾರ್ಯವ್ಯಾಪ್ತಿಯಲ್ಲಿದ್ದು, ಮೊದಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅನುಮೋದನೆ ಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಕೆಳಕಂಡ ಅಂಶಗಳನ್ನು ಮಂಡಿಸಿದೆ.

1. ಹೋಪ್ ಫಾರಂ ಜಂಕ್ಷನ್‌ನಲ್ಲಿ ಕೆಳಸೇತುವೆ ನಿರ್ಮಾಣಕ್ಕಾಗಿ ಖಾಸಗಿ ಭೂಮಾಲೀಕರಿಂದ ಕೆ.ಎಂ.ಸಿ ಕಾಯ್ದೆ 1976 ಸೆಕ್ಷನ್ 175 ರಂತೆ ಮೇಲೆ ತೋರಿಸಿರುವ ಕೋಷ್ಠಕದ (Tabular Column) ಹಾಗೂ ಇತರೆ ವಾರಸುದಾರರಿಂದ ಭೂಸ್ವಾಧೀನ ಪಡಿಸಿಕೊಳ್ಳಲು ಅನುಮೋದನೆ.
2. ಹಳೆ ಮದ್ರಾಸು ರಸ್ತೆ ಸಿಗ್ನಲ್ ಮುಕ್ತ ಕಾರಿಡಾರ್‌ನ ಕಾರಿಡಾರ್ ಕಾಮಗಾರಿಯು ಶೇ.20 ಎಷ್ಟು ಪೂರ್ಣಗೊಂಡಿರುವುದರಿಂದ ಹಾಗೂ ಹೋಪ್ ಫಾರಂ ಕೆಳಸೇತುವೆ ಕಾಮಗಾರಿಯನ್ನು ಪ್ರಾರಂಭಿಸಲು ಖಾಸಗಿ ಭೂಮಾಲೀಕರಿಂದ ಭೂಮಿಯು ಜರೂರಾಗಿ ಬೇಕಾಗಿರುವುದರಿಂದ ಘನ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ಖಾಸಗಿ ಭೂಮಾಲೀಕರಿಗೆ ದಾಖಲೆಗಳನ್ನು ಪರಿಶೀಲಿಸಿ ದೃಡಪಡಿಸಿಕೊಂಡು ಹಣ ಪಾವತಿಸಲು ಹಾಗೂ ಉಪ ನೊಂದಣಾಧಿಕಾರಿಗಳು (ವರ್ತೂರು), ರವರ ಕಛೇರಿಯಲ್ಲಿ ಭೂಮಿ ನೊಂದಾವಣಿ ಮಾಡಿಕೊಳ್ಳಲು ಮತ್ತು ಖರೀದಿಸಿದ ಭೂಮಿಯಲ್ಲಿ ಕೆಳಸೇತುವೆ ನಿರ್ಮಾಣ ಕಾಮಗಾರಿಯನ್ನು ಮುಂದುವರೆಸಲು ಅನುಮೋದನೆ.

ಮೇಲಿನ ಅಂಶಗಳ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 21.11.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## ***13]. ವಿಷಯದ ಸಂಖ್ಯೆ: ತೆಆಸ್ಥಾಸ/98/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 25.10.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 140ರಲ್ಲಿ ಸ್ವತ್ತಿನ ಸಂಖ್ಯೆ 59, 6ನೇ ಅಡ್ಡ ರಸ್ತೆ, ಚಾಮರಾಜಪೇಟೆ, ಬೆಂಗಳೂರು ಇಲ್ಲಿ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಅಂದಾಜು ಮೊತ್ತ ರೂ. 6.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ ಚಾಮರಾಜಪೇಟೆ' ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಕೆ.ಎಂ.ಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ/ ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳಬೇಕಿದೆ. ಸದರಿ ವೆಚ್ಚವನ್ನು 2016–17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

| ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" Budget Book Page No. 111 (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ಥಾವನೆಯ ಮೊತ್ತ |
| **150.00** | **149.25** | **0.00** | **0.75** | **6.00** |

ಜಾಬ್‌ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುವ ಮೊತ್ತ ರೂ. 6.00 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.75 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ ಮಾನ್ಯ ಆಯುಕ್ತರ ಆದೇಶದಂತೆ ರೂ. 6.00 ಲಕ್ಷಗಳಿಗೆ 140–17–000006 ಜಾಬ್‌ಸಂಖ್ಯೆ ನೀಡಲಾಗಿದೆ. ಘಟನೋತ್ತರ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

***14]. ವಿಷಯದ ಸಂಖ್ಯೆ: ತೆಆಸ್ಥಾಸ/99/2016-17***

ಆಯುಕ್ತರ ದಿನಾಂಕ: 26.11.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಅನಾರೋಗ್ಯದಿಂದ ಬಳಲುತ್ತಿರುವ ಆರ್ಥಿಕವಾಗಿ ಹಿಂದುಳಿದ ಮತ್ತು ಬಡ ಕುಟುಂಬದ ನಾಗರೀಕರಿಗೆ ಪೂಜ್ಯ ಮಹಾಪೌರರ ವೈದ್ಯಕೀಯ ಪರಿಹಾರ ನಿಧಿಯಿಂದ ಆರ್ಥಿಕವಾಗಿ ಧನ ಸಹಾಯ ಮಾಡುವ ದೃಷ್ಟಿಯಿಂದ 2016-17ನೇ ಸಾಲಿನ ಆಯವ್ಯಯದಲ್ಲಿ ಪಿ0188 ರಲ್ಲಿ ರೂ.5.00 ಕೋಟಿಗಳ ಅನುದಾನ ಮಾತ್ರ ಲಭ್ಯವಿದ್ದು, ಅದು ಪೂರ್ಣವಾಗಿ ಖರ್ಚಾಗಿರುವ ಹಿನ್ನಲೆಯಲ್ಲಿ ಪೂಜ್ಯ ಮಹಾಪೌರರು ಕೋರಿರುವಂತೆ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಮೀಸಲಿಟ್ಟಿರುವ ಮತ್ತು ಉಳಿತಾಯದ ಪಟ್ಟಿಯನ್ನು ಲಗತ್ತಿಸುತ್ತಾ (ಅನುಬಂಧ-1), ಬೆಂಗಳೂರು ನಗರದ ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಪೂಜ್ಯ ಮಹಾಪೌರರು ವೈದ್ಯಕೀಯ ಪರಿಹಾರ ನಿಧಿ ಪಿ0188ಗೆ ರೂ.5.00 ಕೋಟಿ ಮೊತ್ತವನ್ನು ಮರು ಹೊಂದಾಣಿಕೆ ಮೂಲಕ ಪನರ್ ವಿನಿಯೋಗ ಮಾಡಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

ನಿರ್ಣಯ: **ಆಯುಕ್ತರವರ ದಿನಾಂಕ 26-12-2016 ರ ಟಿಪ್ಪಣಿಯನ್ನು ಒಪ್ಪುತ್ತಾ 2016-17ನೇ ಸಾಲಿನ ಆಯವ್ಯಯದ ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ಉಳಿತಾಯವಾಗುವ ಅನುದಾನದಲ್ಲಿ ಲೆಕ್ಕ ಶೀರ್ಷಿಕೆ ಪಿ. 0188-ಪೂಜ್ಯ ಮಹಾಪೌರರ ವಿವೇಚನಾಧೀನಕ್ಕೆ ಒಳಪಟ್ಟ ವೈದ್ಯಕೀಯ ಅನುದಾನಗಳು ಶೀರ್ಷಿಕೆಗೆ ರೂ.500.00 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಕೆ.ಎಂ.ಸಿ. ಕಾಯಿದೆ ಸೆಕ್ಷನ್ 172ರ ಅನ್ವಯ ವರ್ಗಾವಣೆ ಮಾಡಿ ಒದಗಿಸಲು ಆಯುಕ್ತರು ಕ್ರಮಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

***15]. ವಿಷಯದ ಸಂಖ್ಯೆ: ತೆಆಸ್ಥಾಸ/100/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 08.12.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 82ರ ವ್ಯಾಪ್ತಿಯ ಪಟ್ಟಂದೂರು ಅಗ್ರಹಾರ ಗ್ರಾಮದ ಸರ್ವೆ ನಂ 102/2 ಇಲ್ಲಿ ಅನಧಿಕೃತ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ವೆಚ್ಚ ಕಾಮಗಾರಿಗಳ ಮೊತ್ತ ರೂ. 7.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ (ಮಹದೇವಪುರ) ರವರು ಕೋರಿರುತ್ತಾರೆ. ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವ ವೆಚ್ಚವನ್ನು 2016-17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳಬೇಕಿದೆ.. 2016-17ರ ಆಯವ್ಯಯದ ಅನುದಾನದ ವಿವರಗಳು ಈ ಕೆಳಕಂಡಂತಿದೆ.

| ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" /Budget Book Page No. 111 (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯಂತೆ ಅನುದಾನ ಅಳವಡಿಸಿಕೊಂಡಿರುವ ಮೊತ್ತ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| **150.00** | **8.00** | **157.45** | **0.55** | **7.00** |

ಜಾಬ್‌ಸಂಖ್ಯೆ ನೀಡಲು ಪ್ರಸ್ತಾವನೆ ಸಲ್ಲಿಸಿರುವ ಮೊತ್ತ ರೂ. 7.00 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.55 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುಗೊಳಿಸುವ

ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016–17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016–17ರ ಲೆಕ್ಕಶೀರ್ಷಿಕೆ ಪಿ–0055 ಅಡಿ ಕೊರತೆ ಅನುದಾನ ರೂ. 7.00 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 08.12.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***<u>16]. ವಿಷಯದ ಸಂಖ್ಯೆ: ತೆಆಸ್ಥಾಸ/101/2016–17</u>***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 21.12.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 29, ಕಾಚರಕನಹಳ್ಳಿ ವ್ಯಾಪ್ತಿಯಲ್ಲಿ ಬರುವ ಸ್ವತ್ತಿನ ಸಂಖ್ಯೆ 465ಡಿ, ಜಲವಾಯು ವಿಹಾರ್, ಕಲ್ಯಾಣ ನಗರ (ಪೋ), ಬೆಂಗಳೂರು ಇಲ್ಲಿ ಮಂಜೂರಾತಿ ಪಡೆಯದೇ ಅನದೀಕೃತವಾಗಿ ಮೇಲ್ಛಾವಣಿ ಜಾಗದಲ್ಲಿ ಕಟ್ಟಡ ನಿರ್ಮಿಸಿದ್ದು, ಅನಧಿಕೃತ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಮೊತ್ತ ರೂ. 1.50 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ (ಸರ್ವಜ್ಞನಗರ) ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವ ವೆಚ್ಚವನ್ನು 2016–17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಕೆ.ಎಂ.ಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳಬೇಕಿದೆ. 2016–17ರ ಆಯವ್ಯಯದ ಅನುದಾನದ ವಿವರಗಳು ಈ ಕೆಳಕಂಡಂತಿದೆ.

| ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" /Budget Book Page No. 111 (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯಂತೆ ಅನುದಾನ ಅಳವಡಿಸಿಕೊಂಡಿರುವ ಮೊತ್ತ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| **150.00** | **43.78** | **193.28** | **0.55** | **1.50** |

ಜಾಬ್‌ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುವ ಮೊತ್ತ ರೂ. 1.50 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.55 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುಪೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016–17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016–17ರ ಲೆಕ್ಕಶೀರ್ಷಿಕೆ ಪಿ–0055 ಅಡಿ ಕೊರತೆ ಅನುದಾನ ರೂ. 1.50 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***<u>–ಮುಂದೂಡಿದೆ–</u>***

## *17]. ವಿಷಯದ ಸಂಖ್ಯೆ: ತೆಆಸ್ಥಾಸ/102/2016-17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 23.12.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ. ಎನ್.ಎಂ. ರಫಿ, ಗುತ್ತಿಗೆದಾರರು ರವರು ಕಾರ್ಯಪಾಲಕ ಅಭಿಯಂತರರು (ಹೆಬ್ಬಾಳ) ವಿಭಾಗದ ವ್ಯಾಪ್ತಿಯಲ್ಲಿ ವಾರ್ಡ್ ನಂ.33 ಮತ್ತು 46 ರಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಪೂರ್ಣಗೊಳಿಸಿರುತ್ತಾರೆ.

| Sl No | Ward No | Name of Work | BR No | Bill Amount | Job code | P-Code |
|---|---|---|---|---|---|---|
| 1 | 33 | Improvements of drain at 5th Main (Opp to Adigas Hotel) and surrounding of Rahamathnagar in Ward No.33 | 91<br>27.06.2015 | 12,75,000/- | 033-15-000010 | P-1771 |
| 2 | 46 | Construction of drain at Chunchappa Block in JC Nagar Ward No.46 | 184<br>30.09.2015 | 18,53,538/- | 046-15-000020 | P-1771 |
| 3 | 46 | Restoration of CC road, Road cutting portions and pot holes at JC Nagar Ward No.46 | 185<br>30.09.2015 | 17,93,206/- | 046-15-000025 | P-1771 |
| | | | **Total** | **49,21,744/-** | | |

ಗುತ್ತಿಗೆದಾರರಾದ ಶ್ರೀ. ಎನ್.ಎಂ. ರಫಿ ರವರು ದಿನಾಂಕ: 27.01.2016 ರಂದು ಮಾನ್ಯ ಮುಖ್ಯಮಂತ್ರಿಯವರ ಅಧೀನ ಕಾರ್ಯದರ್ಶಿ ರವರಿಂದ ಮನವಿ ಪತ್ರ ಸಲ್ಲಿಸಿ, ಆರ್ಥಿಕ ತೊಂದರೆ ಇರುವುದರಿಂದ ನಿರ್ವಹಿಸಿರುವ ಕಾಮಗಾರಿಗಳ ಹಣ ಬಿಡುಗಡೆಗಾಗಿ ಕೋರಿರುತ್ತಾರೆ. ಈ ಸಂಬಂಧವಾಗಿ ಸಲ್ಲಿಸಿರುವ ಕಾಮಗಾರಿಯ ಬಿಲ್ಲನ್ನು ಲೆಕ್ಕ ಪರಿಶೋಧನೆ ಮಾಡಿ ನಂತರ 3rd Party Inspection ವರದಿಯೊಂದಿಗೆ ಕಡತವನ್ನು ಮಂಡಿಸಲಾಗಿ ಮಾನ್ಯ ವಿಶೇಷ ಆಯುಕ್ತರು (ಹಣಕಾಸು) ರವರು Humanitation Consideration ಅಡಿಯಲ್ಲಿ ಪರಿಗಣಿಸಿ, ವಿಶೇಷ ಆದ್ಯತೆ ಮೇಲೆ ಬಿಲ್ ಪಾವತಿಸುವ ಬಗ್ಗೆ ಮಾನ್ಯ ಆಯುಕ್ತರವರ ಅನುಮೋದನೆ ಕೋರಲಾಗಿ ದಿನಾಂಕ: 08.02.2016 ರಂದು ಮಾನ್ಯ ಆಯುಕ್ತರವರು ಸದರಿ ಪ್ರಸ್ತಾವನೆಯನ್ನು ಪರಿಗಣಿಸುವುದು ಸೂಕ್ತವಾಗಲಾರದು ಎಂದು ಆದೇಶಿಸಿರುತ್ತಾರೆ. ಮುಂದುವರೆದು ದಿನಾಂಕ: 22.09.2016 ರಂದು ಮತ್ತೊಮ್ಮೆ ಶ್ರೀ. ಎನ್.ಎಂ. ಸಾದಿಕ್, ಗುತ್ತಿಗೆದಾರರ ತಂದೆಯವರು ಮಾನ್ಯ ಆಯುಕ್ತರವರಿಗೆ ಮನವಿ ಸಲ್ಲಿಸಿರುತ್ತಾರೆ. ಮಾನ್ಯ ಆಯುಕ್ತರವರು ಸದರಿ ವಿಷಯವನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಸೂಚಿಸಿರುವ ಮೇರೆಗೆ ಮೇಲಿನ ಅಂಶವನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಸಲ್ಲಿಸಲು ಟಿಪ್ಪಣಿಯನ್ನು ಮಂಡಿಸಿದೆ.

**ನಿರ್ಣಯ: ಪಾಲಿಕೆ ಸಭೆಯ ನಿರ್ಣಯದಂತೆ ಅಗತ್ಯ ಕ್ರಮಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

## *18]. ವಿಷಯದ ಸಂಖ್ಯೆ: ತೆಆಸ್ಥಾಸ/103/2016-17*

ಆಯುಕ್ತರ ದಿನಾಂಕ: 15.12.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮೆ॥. ಸ್ನೇಹದೀಪ ಟ್ರಸ್ಟ್ ಫಾರ್ ದಿ ಡಿಸೇಬಲ್ಡ್ ಸಂಸ್ಥೆ, ಬೆಂಗಳೂರು ರವರು 2016-17ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಸಂಘ/ಸಂಸ್ಥೆಗಳಿಗೆ ಮಿಸಲಿರಿಸಿದ ಅನುದಾನ ರೂ.500.00 ಲಕ್ಷಗಳಲ್ಲಿ ರೂ.7,81,500/- ಸಹಾಯಧನವನ್ನು ಬಿಡುಗಡೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಮುಂದುವರೆದಂತೆ 2016-17ನೇ ಸಾಲಿನ ಆಯವಯವ್ಯಯದ ಲೆಕ್ಕಶೀರ್ಷಿಕೆ 24 ಸಂಸ್ಕೃತಿ ಮತ್ತು ಕ್ರೀಡೆ, ಪಿ-048 ಕೊಡುಗೆಗಳು ಮತ್ತು ಸಹಾಯಧನ ಅನುಬಂಧ-2ರ ಕ್ರಮ ಸಂಖ್ಯೆ: 14ರಲ್ಲಿ ಮೆ॥. ಸ್ನೇಹದೀಪ

ಟ್ರಸ್ಟ್ ಫಾರ್ ದಿ ಡಿಸೇಬಲ್ಡ್ ಸಂಸ್ಥೆ, ಬೆಂಗಳೂರು ರವರಿಗೆ ರೂ.7,81,500/–ಗಳ ಅನುದಾನವನ್ನು ನಿಗಧಿ ಮಾಡಲಾಗಿರುತ್ತದೆ.

ತತ್ಸಂಬಂಧವಾಗಿ ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ ಮೆ॥. ಸ್ನೇಹದೀಪ ಟ್ರಸ್ಟ್ ಫಾರ್ ದಿ ಡಿಸೇಬಲ್ಡ್ ಸಂಸ್ಥೆ, ಬೆಂಗಳೂರು ರವರಿಗೆ ಸಹಾಯಧನ ಮಂಜೂರಾತಿ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಗೆ ರೂ.2.00 (ಎರಡು ಲಕ್ಷ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

***19]. ವಿಷಯದ ಸಂಖ್ಯೆ: ತೆಆಸ್ಥಾಸ/104/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 26–12–2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರವು 2015–16ನೇ ಸಾಲಿಗೆ ಬಿಬಿಎಂಪಿಗೆ ಘೋಷಿಸಿರುವಂತೆ ಬಿಬಿಎಂಪಿಗೆ ಹೊಸದಾಗಿ ಸೇರ್ಪಡೆಗೊಂಡಿರುವ ಹಿಂದಿನ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ 279 ನಆಈ ಎಸ್.ಎಫ್.ಸಿ 2015, ಬೆಂಗಳೂರು, ದಿನಾಂಕ 08–1–2016 ರಲ್ಲಿ ರೂ. 250.00 ಕೋಟಿಗಳ ವಿಶೇಷ ಅನುದಾನದಡಿ 9 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಮಗಾರಿ ಕೈಗೊಳ್ಳಲು ಅನುಮೋದನೆ ನೀಡಲಾಗಿದೆ. ಸರ್ಕಾರದ ಅನುಮೋದನೆಯಂತೆ ರೂ. 250.00 ಕೋಟಿಗಳಲ್ಲಿ ಕೆ.ಆರ್.ಪುರಂ, ಯಶವಂತಪುರ, ರಾಜರಾಜೇಶ್ವರಿನಗರ, ಬ್ಯಾಟರಾಯನಪುರ ಕ್ಷೇತ್ರಗಳ ಕ್ರಿಯಾ ಯೋಜನೆಗೆ 2015–16 ನೇ ಸಾಲಿನಲ್ಲಿ ರೂ. 175.00 ಕೊಟಿಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ ನಈ 73 ಎಸ್‌ಎಫ್‌ಸಿ 2016, ಬೆಂಗಳೂರು, ದಿನಾಂಕ 20–9–2016 ರಲ್ಲಿ ಮೇಲ್ಕಂಡಂತೆ ಯಲಹಂಕ ವಿಧಾನಸಭಾ ಕ್ಷೇತ್ರಕ್ಕೆ ಒದಗಿಸಿರುವ ರೂ. 15.00 ಕೋಟಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ ಕಾಮಗಾರಿ ಅನುಷ್ಠಾನಗೊಳಿಸಲು ಆದೇಶಿಸಿರುತ್ತದೆ. ಮುಖ್ಯ ಅಭಿಯಂತರರು (ಯಲಹಂಕ) ರವರು 30 ಕಾಮಗಾರಿಗಳ ಅಂದಾಜು ಮೊತ್ತ ರೂ. 15.00 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಲು ಕೋರಿರುತ್ತಾರೆ.

2016–17ರ ಆಯವ್ಯಯದ ಸರ್ಕಾರದ ಅನುದಾನದ ಲೆಕ್ಕಶೀರ್ಷಿಕೆ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಪಿ–3089 ಅಡಿ ಚಾಲ್ತಿ ಕಾಮಗಾರಿಗಳಿಗಾಗಿ ಅನುದಾನ ಮೀಸಲಿರಿಸಿರುವುದಿಲ್ಲ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ/199/ಎಸ್.ಎಫ್.ಸಿ/2016 ಬೆಂಗಳೂರು ದಿನಾಂಕ: 21–06–2016 ರ ಆದೇಶದಲ್ಲಿ ನಗರೋತ್ಥಾನ ಮತ್ತು ವಿಶೇಷ ಮೂಲಭೂತ ಸೌಕರ್ಯ, ಕೆರೆಗಳು ಮೊತ್ತ ರೂ. 7300–00 ಕೋಟಿಗಳ ಕ್ರಿಯಾ ಯೋಜನೆ Annexure-1 to Annexure-18 ರ ವರೆಗೆ ಅನುಮೋದನೆ ನೀಡಿದೆ. Annexure-11 ರಲ್ಲಿ ಮುಂದುವರೆದ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ 279 ನಆಈ ಎಸ್.ಎಫ್.ಸಿ 2015, ಬೆಂಗಳೂರು, ದಿನಾಂಕ: 08–1–2016 ರಲ್ಲಿ ಅನುಮೋದಿಸಿರುವಂತೆ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ರೂ. 250.00 ಕೋಟಿಗಳ ಅನುದಾನ ಒದಗಿಸಿದೆ. 2016–17ರ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–3089 ಅಡಿ ಚಾಲ್ತಿ ಕಾಮಗಾರಿಗಳಿಗಾಗಿ ಅನುದಾನ ಮೀಸಲಿರಿಸದೇ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. 2016–17ರ ಲೆಕ್ಕಶೀರ್ಷಿಕೆ ಪಿ–3089 ರ ಚಾಲ್ತಿ ಕಾಮಗಾರಿಗಳು ಅಡಿ

ರೂ. 15.00 ಕೋಟಿಗಳ ಅನುದಾನ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 26–12–216ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

***20]. ವಿಷಯದ ಸಂಖ್ಯೆ: ತೆಆಸ್ಥಾಸ/105/2016–17***

ವಿಶೇಷ ಆಯುಕ್ತರು (ವಿದ್ಯೆ) ರವರ ದಿನಾಂಕ: 22.11.2016ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, 2014–15ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ವಿವಿಧ ವಾರ್ಡುಗಳಲ್ಲಿನ ಆಟದ ಮೈದಾನ / ಉದ್ಯಾನವನಗಳಲ್ಲಿ ಹೊಸದಾಗಿ ತಯಾರಿಸಿದ ಮಕ್ಕಳ ಆಟದ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸುವ ಕಾರ್ಯಕ್ಕೆ ದಿನಾಂಕ: 11–03–2015ರಂದು ಇಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿದ್ದು ಟೆಂಡರ್ ನಿಯಮಾವಳಿ ರೀತ್ಯ ದಿನಾಂಕ: 23–03–2015 ರಂದುತಾಂತ್ರಿಕ ಬಿಡ್‌ನ್ನು ತೆರೆಯಲಾಯಿತು. ಸದರಿ ಟೆಂಡರ್‌ನಲ್ಲಿ 1.ಮೆ॥ ಟಾಯ್ಸ್‌ಅಂಡ್ ಸ್ಪೋರ್ಟ್ಸ್ 2.ಮೆ॥ ವಿನ್ಯಾಸ್ ಪ್ಲೇ ಸಿಸ್ಟಮ್ಸ್ ಸಂಸ್ಥೆಯವರು ಭಾಗವಹಿಸಿರುತ್ತಾರೆ. ನಂತರ ಇಬ್ಬರು ಟೆಂಡರ್‌ದಾರರ ತಾಂತ್ರಿಕ ಬಿಡ್‌ನ ದಾಖಲೆಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ತಾಂತ್ರಿಕ ಪರಿಶೀಲನ ಸಮಿತಿಯನ್ನು ರಚಿಸಿದ್ದು, ತಾಂತ್ರಿಕ ಪರಿಶೀಲನ ಸಮಿತಿ ರವರು ಇಬ್ಬರು ಟೆಂಡರ್‌ದಾರರ ದಾಖಲಾತಿಗಳನ್ನು ಪರಿಶೀಲಿಸಿ ಸಲ್ಲಿಸಿರುವ ವರದಿಯಲ್ಲಿ ಇಬ್ಬರು ಟೆಂಡರ್‌ದಾರರು ಸಲ್ಲಿಸಿರುವ ದಾಖಲಾತಿಗಳು ತೃಪ್ತಿಕರವಾಗಿರುವ ಬಗ್ಗೆ ಸ್ಪಷ್ಟ ವರದಿ ಸಲ್ಲಿಸಿರುತ್ತಾರೆ. ಈ ವರದಿಯ ಆಧಾರದ ಮೇಲೆ ಇಬ್ಬರು ಟೆಂಡರ್‌ದಾರರ ಆರ್ಥಿಕ ಬಿಡ್‌ನ್ನು ತೆರೆದು ದರಗಳ ತುಲನಾತ್ಮಕ ಪಟ್ಟಿಯನ್ನು ಸಿದ್ದಪಡಿಸಿ ಕಡತದಲ್ಲಿ ಲಗತ್ತಿಸಿದೆ.

**ಟೆಂಡರ್‌ದಾರರು ಸಲ್ಲಿಸಿರುವ ತುಲನಾತ್ಮಕ ಪಟ್ಟಿ**

| ಕ್ರ. ಸಂ | ಸಂಸ್ಥೆಯ ಹೆಸರು | ಮಲ್ಟಿ ಪ್ಲೇ ಸಿಸ್ಟಮ್ | ಲಾಸ್ಟ್ ಪುಲ್‌ಡೌನ್ | ಚೆಸ್ಟ್ ಪ್ರಸ್ | ಹಿಪ್ ಸಿವೆಲ್ | ಒಟ್ಟು |
|---|---|---|---|---|---|---|
| 1 | ಮೆ॥ ಟಾಯ್ಸ್‌ಅಂಡ್ ಸ್ಪೋರ್ಟ್ಸ್ (ಎಲ್1) | 11,07,000 | 1,72,200 | 1,66,500 | 1,20,000 | 15,65,700 |
| 2 | ಮೆ॥ ವಿನ್ಯಾಸ್ ಪ್ಲೇ ಸಿಸ್ಟಮ್ಸ್ | 11,55,000 | 1,67,000 | 1,62,600 | 1,17,000 | 16,01,600 |

ಟೆಂಡರ್ ಪಾರದರ್ಶಕ ಕಾಯ್ದೆ ನಿಯಮಾವಳಿ ರೀತ್ಯ ಮೆ॥ ಟಾಯ್ಸ್ ಅಂಡ್ ಸ್ಪೋರ್ಟ್ಸ್ ಸಂಸ್ಥೆಯವರು (ಎಲ್1) ಆಗಿದ್ದು ಅಂಗೀಕೃತ ಟೆಂಡರ್‌ದಾರರಾಗಿರುವುದರಿಂದ ವಿವಿಧ ವಾರ್ಡುಗಳಲ್ಲಿನ ಆಟದ ಮೈದಾನ / ಉದ್ಯಾನವನಗಳಲ್ಲಿ ಹೊಸದಾಗಿ ತಯಾರಿಸಿದ ಮಕ್ಕಳ ಆಟದ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸುವ ಕಾರ್ಯಕ್ಕೆ ಕಾರ್ಯಾದೇಶ ನೀಡಿದ್ದು ಸದರಿಯವರು ಕಾರ್ಯಾದೇಶದಲ್ಲಿ ಸೂಚಿಸಿರುವ ರೀತ್ಯ ಸಂಪೂರ್ಣ ಕಾರ್ಯವನ್ನು ತೃಪ್ತಿಕರವಾಗಿ ನಿರ್ವಹಿಸಿದ್ದು ಸದರಿ ಕಾರ್ಯದ ಬಿಲ್ಲಿನ ಸಂಖ್ಯೆ 271 ದಿನಾಂಕ: 07.01.2016 ರಲ್ಲಿ ಬಿಲ್ಲಿನ ಮೊತ್ತ ರೂ. 1,99,09,300 ಗಳನ್ನು ಬಿಲ್ಲಿನ ಹಣ ಪಾವತಿಗಾಗಿಕೋರಿಕೆ ಸಲ್ಲಿಸಿದ್ದು ಸದರಿಯವರ ಕೋರಿಕೆಯ ಮೇರೆಗೆ ಎಂ.ಸಿ.ಇ.4 ರ ನಮೂನೆಯಲ್ಲಿ ಡಿ.ಸಿ.ಬಿಲ್ ಮೊತ್ತ ರೂ. 1,99,09,300 ಗಳಿಗೆ ಬಿಲ್ಲಿನ ಹಣ ಪಾವತಿಗೆ ಮುಖ್ಯ ಲೆಕ್ಕಾಧಿಕಾರಿರವರಿಗೆ ಮಂಡಿಸಲಾಗಿತ್ತು.

2016–17ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆಯಡಿ ಅನುದಾನ ಲಭ್ಯವಿಲ್ಲವೆಂದು ಸೂಚಿಸಿರುವುದರಿಂದ ಮೆ॥ ಟಾಯ್ಸ್ ಅಂಡ್ ಸ್ಪೋರ್ಟ್ಸ್ ಸಂಸ್ಥೆಯವರಿಗೆ ಸದರಿ ಕಾರ್ಯದ ಬಿಲ್‌ನ ಮೊತ್ತ ರೂ. 1,99,09,300 ಗಳನ್ನು 2016–17ನೇ ಸಾಲಿನ ಆಯವ್ಯಯ 25 ಶಿಕ್ಷಣ ಪಿ0242 ರಲ್ಲಿ

ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ಹಾಗೂ ಹೆಲ್ತ್ ಚೆಕ್ ಅಪ್ ಶೀರ್ಷಿಕೆಯಡಿ ಒಟ್ಟು ರೂ. 200.00 ಲಕ್ಷಗಳು ಲಭ್ಯವಿದ್ದು, ಸದರಿ ಮೊತ್ತದಲ್ಲಿ ಬಿಲ್ಲಿನ ಮೊತ್ತ ರೂ.1,99,09,300 ಗಳನ್ನು ಪುನರ್ವಿನಿಯೋಗ ಪಡಿಸಿಕೊಳ್ಳುವ ಬಗ್ಗೆ ಶಿಕ್ಷಣ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಕೌನ್ಸಿಲ್ ನಿರ್ಣಯಕ್ಕೆ ಮಂಡಿಸಿರುವ **ವಿಶೇಷ ಆಯುಕ್ತರು (ವಿದ್ಯೆ) ರವರ ದಿನಾಂಕ: 22.11.2016ರ ಟಿಪ್ಪಣಿಯನ್ನು, ಮಾನ್ಯ ಆಯುಕ್ತರ ದಿನಾಂಕ: 05.05.216ರ ನಡವಳಿಯಲ್ಲಿನ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಅನ್ವಯ ಚರ್ಚಿಸಿ ಒಪ್ಪಿರುವ ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ: 16.12.2016ರ ಸಭೆಯ ನಿರ್ಣಯ.**

***–ಮುಂದೂಡಿದೆ–***

## *21]. ವಿಷಯದ ಸಂಖ್ಯೆ: ತೆಆಸ್ಥಾಸ/106/2016–17*

ವಿಶೇಷ ಆಯುಕ್ತರು (ವಿದ್ಯೆ) ರವರ ದಿನಾಂಕ: 22.11.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮಾನ್ಯ ಆಯುಕ್ತರು ರವರ ಆದೇಶದ ಸಂಖ್ಯೆ: ಪಿ.ಎಸ್.ಆರ್(3)ಪಿಆರ್/2073/2012–13 ದಿನಾಂಕ: 18–03–2013 ರಂತೆ ವಾರ್ಡ್ ನಂ 72ರ ಹೇರೋಹಳ್ಳಿಯಲ್ಲಿ ಪಾಲಿಕೆಯ ವತಿಯಿಂದ ಪ್ರಾರಂಭಿಸಿರುವ ಈ ಕೆಳಕಂಡ 6 ಶಿಶುವಿಹಾರಗಳು ಖಾಸಗಿ ಕಟ್ಟಡದಲ್ಲಿ ಚಾಲನೆಗೊಳ್ಳುತ್ತಿದ್ದು, ಸದರಿ ಶಿಶುವಿಹಾರಗಳಿಗೆ ಕೆಳಕಂಡ ನಮೂನೆಯ ಅಂಕಣ (4) ರಂತೆ ಅಂತಿಮವಾಗಿ ಪಾಲಿಕೆಯಿಂದ ಕಟ್ಟಡದ ಬಾಡಿಗೆಯನ್ನು ಪಾವತಿಸಲಾಗಿರುತ್ತದೆ.

| ಕ್ರ. ಸಂ. | ನರ್ಸರಿ ಶಾಲೆಗಳ ಹೆಸರು | ನರ್ಸರಿಗಳು ಪ್ರಾರಂಭವಾಗಿರುವ ದಿನಾಂಕ | ಅಂತಿಮವಾಗಿ ಬಾಡಿಗೆ ನೀಡಬೇಕಾಗಿರುವ ವಿವರ | ಮಾಸಿಕ ಬಾಡಿಗೆದರ ರೂ. | ಒಟ್ಟು ಬಾಡಿಗೆ ಮೊತ್ತ ರೂ. |
|---|---|---|---|---|---|
| 1 | ಮಹದೇಶ್ವರನಗರ | 18–08–2011 | 18–10–2015 ರಿಂದ 17–03–2016 | 4000*5 | 20,000–00 |
| 2 | ಮುನೇಶ್ವರ ಬಡಾವಣೆ | 01–01–2011 | 01–11–2015 ರಿಂದ 31–03–2016 | 4000*5 | 20,000–00 |
| 3 | ಕೆಂಪೇಗೌಡನಗರ | 01–10–2011 | 01–11–2015 ರಿಂದ 31–03–2016 | 5000*5 | 25,000–00 |
| 4 | ವಿಘ್ನೇಶ್ವರನಗರ | 01–12–2011 | 01–11–2015 ರಿಂದ 31–03–2016 | 4000*5 | 20,000–00 |
| 5 | ತುಂಗಾನಗರ | 01–10–2011 | 01–11–2015 ರಿಂದ 31–03–2016 | 6000*5 | 30,000–00 |
| 6 | ಪ್ರಸನ್ನ ಬಡಾವಣೆ | 18–08–2011 | 18–10–2015 ರಿಂದ 17–03–2016 | 9000*5 | 45,000–00 |

ಪ್ರಸಕ್ತ 2016-17ನೇ ಸಾಲಿನಲ್ಲಿ ಸದರಿ ಕಟ್ಟಡಗಳಿಗೆ ಮಾಹೆಯಾನ ಬಾಡಿಗೆಯನ್ನು ಪಾವತಿ ಮಾಡಲು ಶಿಕ್ಷಣ ಇಲಾಖೆಯಲ್ಲಿ ಯಾವುದೇ ಅನುದಾನವನ್ನು ನಿಗಧಿಪಡಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ 25 ಶಿಕ್ಷಣ, ಶೈಕ್ಷಣಿಕ ಅಭಿವೃದ್ಧಿ ಚಟುವಟಿಕೆಗಳು, ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ಕಾರ್ಯಕ್ರಮಗಳು ಹಾಗೂ ವಿದ್ಯಾರ್ಥಿಗಳಿಗೆ ಮಹಾಪುರುಷರ ಜೀವನ ಚರಿತ್ರೆಯ ಪುಸ್ತಕ ವಿತರಣೆ (ಪಿ-2256) ಶೀರ್ಷಿಕೆಯಲ್ಲಿನ ರೂ.30.00 ಲಕ್ಷಗಳಲ್ಲಿ ಪುನರ್ವಿನಿಯೋಗಿಸಿಕೊಳ್ಳಲು ಮಾನ್ಯ ಶಿಕ್ಷಣ ಸ್ಥಾಯಿ ಸಮಿತಿಯ ಅನುಮೋದನೆಯ ನಂತರ ಮಾನ್ಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಕೋರಿ ಮಂಡಿಸಿರುವ **ವಿಶೇಷ ಆಯುಕ್ತರು (ವಿದ್ಯೆ) ರವರ ದಿನಾಂಕ: 22.11.2016ರ ಟಿಪ್ಪಣಿಯನ್ನು ಚರ್ಚಿಸಿ ಒಪ್ಪಿರುವ ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ: 16.12.2016ರ ಸಭೆಯ ನಿರ್ಣಯ.**

**ನಿರ್ಣಯ: 2016-17ನೇ ಸಾಲಿನ ಆಡಳಿತಾತ್ಮಕ ವೆಚ್ಚಗಳ ಲೆಕ್ಕಶೀರ್ಷಿಕೆ ಅಡಿಯಲ್ಲಿ ಉಳಿಕೆಯಿರುವ ಅನುದಾನದಲ್ಲಿ ರೂ.30.00 (ಮೂವತ್ತು ಲಕ್ಷಗಳು) ಲಕ್ಷಗಳನ್ನು ಪುನರ್ವಿನಿಯೋಗ ಪಡಿಸಿಕೊಳ್ಳುವ ಮಾರ್ಪಾಡಿನೊಂದಿಗೆ ವಿಶೇಷ ಆಯುಕ್ತರು (ವಿದ್ಯೆ) ರವರ ದಿನಾಂಕ: 22-11-2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

***22]. ವಿಷಯದ ಸಂಖ್ಯೆ: ತೆಆಸ್ಥಾಸ/107/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 26.12.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಾಲಿಕೆಗೆ 14ನೇ ಹಣಕಾಸು ಆಯೋಗದಲ್ಲಿ 2016-17ನೇ ಸಾಲಿಗೆ ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ/245/ಎಸ್‌ಎಫ್‌ಸಿ/2015, ದಿನಾಂಕ: 17.07.2015ರಲ್ಲಿ ಗುರುತಿಸಿರುವ ಉದ್ದೇಶಗಳಿಗೆ ಒಟ್ಟು ಮೊತ್ತ ರೂ.23999.36 ಲಕ್ಷಗಳ ಅನುದಾನಕ್ಕೆ ಅನುವು ಮಾಡಿದ್ದು ಕ್ರಿಯಾಯೋಜನೆಗಳನ್ನು ಪ್ರತ್ಯೇಕವಾಗಿ ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ/463/ಎಸ್‌ಎಫ್‌ಸಿ/2016, ದಿನಾಂಕ: 03.12.2016 ರಲ್ಲಿ ಪಾಲಿಕೆಗೆ ನಿಗಧಿಪಡಿಸಿರುವ ರೂ.22871.55 ಲಕ್ಷಗಳು ಮತ್ತು ಬಿಬಿಎಂಪಿಯ ಸ್ವಂತ ಅನುದಾನ ರೂ.999.45 ಲಕ್ಷಗಳು ಸೇರಿದಂತೆ ಒಟ್ಟು ರೂ.23871.00 ಲಕ್ಷಗಳ ಅನುದಾನದಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾಯೊಜನೆಗೆ ಅನುಮೋದನೆ ನೀಡಲಾಗಿದ್ದ ಮತ್ತು 09 ಉದ್ದೇಶಗಳ ಕ್ರಿಯಾಯೊಜನೆಯ ಪಟ್ಟಿಗಳನ್ನು ಕಡತಕ್ಕೆ ಲಗತ್ತಿಸಲಾಗಿದೆ.

ಸರ್ಕಾರದ ಆದೇಶದಲ್ಲಿ ಪಾಲಿಕೆಯ ಸ್ವಂತ ಅನುದಾನ ರೂ.999.45 ಲಕ್ಷಗಳ ಮೊತ್ತವನ್ನು ಭರಿಸಲು ಸೂಚಿಸಿದ್ದು ಈ ವಿಚಾರದಲ್ಲಿ ಪಾಲಿಕೆಯ ಇತರೆ ಲೆಕ್ಕಶೀರ್ಷಿಕೆ ಅಡಿಗಳಲ್ಲಿ ಉಳಿದಿರುವ ಅನುದಾಗಳಲ್ಲಿ ರೂ.999.45 ಲಕ್ಷಗಳ ಮೊತ್ತವನ್ನು ಪುನರ್ ಹಂಚಿಕೆ ಮಾಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ 26-12-2016 ರವರ ಟಿಪ್ಪಣಿಯನ್ನು ಒಪ್ಪುತ್ತಾ ಸರ್ಕಾರದ ಆದೇಶ ಸಂಖ್ಯೆ ನಅಇ/353/ಎಂ.ಎನ್.ಯು/2016 ದಿನಾಂಕ: 08-06-2016 ಮತ್ತು ಸರ್ಕಾರದ ಆದೇಶ ಸಂಖ್ಯೆ ನಅಇ/463/ಎಸ್.ಎಫ್.ಸಿ/ 2016 ಬೆಂಗಳೂರು ದಿನಾಂಕ: 03-12-2016 ರಂತೆ 2016-17ನೇ ಸಾಲಿನ 14ನೇ ಹಣಕಾಸು ಆಯೋಗ ಅನುದಾನದ ಅನುಮೋದಿತ ಕಾಮಗಾರಿಗಳನ್ನು ಕೈಗೊಳ್ಳಲು ಹಾಗೂ ಆಯುಕ್ತರು, ಬಿ.ಬಿ.ಎಂ.ಪಿ. ರವರ ಪತ್ರ ಸಂಖ್ಯೆ ಪಿ.ಎಸ್.ಆರ್(4)/8437/2016-17**

**ದಿನಾಂಕ 8-11-2016 ರಂತೆ ಅಗತ್ಯವಿರುವ ವ್ಯತ್ಯಾಸದ ಮೊತ್ತ ರೂ.1538.45 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಲೆಕ್ಕ ಶೀರ್ಷಿಕೆ ಪಿ.3110ಕ್ಕೆ ಕೆ.ಎಂ.ಸಿ. ಕಾಯಿದೆ 172ರ ಅನ್ವಯ ವರ್ಗಾವಣೆ ಮಾಡಿ ಒದಗಿಸಲು ಆಯುಕ್ತರು ಕ್ರಮಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

***23]. ವಿಷಯದ ಸಂಖ್ಯೆ: ತೆಲಸ್ಥಾಸ/108/2016-17***

ಆಯುಕ್ತರ ದಿನಾಂಕ: 27.12.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರವರು ದಿನಾಂಕ:03-11-2016 ರಂದು ಟಿಪ್ಪಣಿ ನೀಡಿದ್ದು, ಸದರಿ ಟಿಪ್ಪಣಿಯಲ್ಲಿ ವಾಹನ ಸಂ:ಕೆಎ-01-ಎಂಹೆಚ್-2139 ಇನ್ನೋವಾ ವಾಹನವನ್ನು ಹಂಚಿಕೆ ಮಾಡಲಾಗಿರುವುದು ಸರಿಯಷ್ಟೆ. ಸದರಿ ವಾಹನವು ತಹಲ್‌ವರೆವಿಗೆ ಸುಮಾರು 2 ಲಕ್ಷಗಳಿಗೂ ಅಧಿಕ ಕಿಲೋಮೀಟರ್ ಚಲಿಸಿದ್ದು, ವಾಹನದ ಕ್ಲಚ್ ಬಾಕ್ಸ್, ಶಾಕ್ ಅಬ್ಸರ್‌ವರ್‌ಗಳು ಸರಿಯಾಗಿ ಕಾರ್ಯನಿರ್ವಹಿಸದೆ ಇರುವುದು ಮತ್ತು ಇತರೆ ತಾಂತ್ರಿಕ ದೋಷಗಳು ಆಗಿಂದ್ದಾಗ್ಗೆ ಮರುಕಳುಹಿಸುತ್ತಿರುವುದರಿಂದಾಗಿ ಸದರಿ ವಾಹನವನ್ನು ಪದೇ ಪದೇ ದುರಸ್ತಿ ಪಡಿಸಬೇಕಾಗಿರುವುದರಿಂದ ಹೊಸ "ಇನೋವಾ ಕ್ರಿಸ್ಟಾ" ವಾಹನ ಖರೀದಿಸಿ ಹಂಚಿಕೆ ಮಾಡಲು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿ, ಅನುಮೋದಿತ ಆಯವ್ಯಯದಲ್ಲಿ ಪ್ರಹರಿ-ಇತರೆ ವಾಹನಗಳ ಖರೀದಿಗೆ ಸಂಬಂಧಿಸಿದ ಲೆಕ್ಕಶೀರ್ಷಿಕೆ ಪಿ-0110 ಅಡಿಯಲ್ಲಿ ರೂ.100.00 ಲಕ್ಷಗಳ ಅನುದಾನವನ್ನು ಮೀಸಲಿರಿಸಿದ್ದು, ಸದರಿ ಅನುದಾನವು ಸಂಪೂರ್ಣವಾಗಿ ವೆಚ್ಚವಾಗಿರುತ್ತದೆ.

2016-17ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆಯಡಿ ಉಪಯೋಗಿಸದೆ ಉಳಿಸಿರುವ ಅನುದಾನದಲ್ಲಿ (ಇತರೆ ಅವಶ್ಯಕ ಕಾಮಗಾರಿಗಳ ನಿರ್ವಹಣೆ/ಆರೋಗ್ಯ/ಆಡಳಿತ ವೆಚ್ಚಗಳನ್ನು ಹೊರತುಪಡಿಸಿ) ಲೆಕ್ಕಶೀರ್ಷಿಕೆ: ಪಿ-0110ಗೆ ಮರುಹೊಂದಾಣಿಕೆ ಮಾಡುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ತೀರ್ಮಾನ ಕೈಗೊಳ್ಳುವ ಕುರಿತು ಟಿಪ್ಪಣಿ ಮಂಡಿಸಲಾಗಿದೆ.

**ನಿರ್ಣಯ: ಆಯುಕ್ತರವರ ದಿನಾಂಕ 27-12-2016 ರ ಟಿಪ್ಪಣಿಯನ್ನು ಒಪ್ಪುತ್ತಾ, ಕೊರತೆ ಇರುವ ಮೊತ್ತವನ್ನು 2016-17ನೇ ಸಾಲಿನ ಆಯವ್ಯಯದ ಸಾಮಾನ್ಯ ಆಡಳಿತ ವೆಚ್ಚಗಳ ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ಉಳಿತಾಯವಾಗುವ ಅನುದಾನದಲ್ಲಿ ಲೆಕ್ಕ ಶೀರ್ಷಿಕೆ ಪಿ.0110-ಪ್ರಹರಿ-ಇತರೆ ವಾಹನಗಳ ಖರೀದಿ ಶೀರ್ಷಿಕೆಗೆ ವರ್ಗಾವಣೆ ಮಾಡಿ ವೆಚ್ಚವನ್ನು ಭರಿಸಿ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಆಯುಕ್ತರು ಕ್ರಮಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

***24]. ವಿಷಯದ ಸಂಖ್ಯೆ: ತೆಲಸ್ಥಾಸ/109/2016-17***

ಆಯುಕ್ತರ ದಿನಾಂಕ: 26.12.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಲಯ ವ್ಯಾಪ್ತಿಗಳಲ್ಲಿ ನಡೆಸಿದ ತಪಾಸಣೆ ವೇಳೆ ಮೂಲಭೂತ ಸೌಕರ್ಯಗಳ ಕೊರತೆ ಮತ್ತು ಸಾರ್ವಜನಿಕರಿಗೆ ಪ್ರತಿನಿತ್ಯ ಅನಾನುಕೂಲವಾಗಿ ಪರಿಣಮಿಸಿರುವ ಅನೇಕ ಸಮಸ್ಯೆಗಳು ಕಂಡುಬಂದಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಕೆಲವು ತುರ್ತು ಕಾಮಗಾರಿಗಳನ್ನು ಕೈಗೊಳ್ಳುವುದು ಅವಶ್ಯಕತೆ ಇರುವುದಾಗಿ ಉಲ್ಲೇಖಿತ ಪತ್ರದಲ್ಲಿ ಪೂಜ್ಯ ಮಹಾಪೌರರು ಕೋರಿರುವುದರಿಂದ 2016-17 ನೇ ಸಾಲಿನ ಅನುಮೋದಿತ ಆಯವ್ಯಯ ಲೆಕ್ಕಶೀರ್ಷಿಕೆ ಅಡಿ ಪಿ-0190 :

ಪೂಜ್ಯ ಮಹಾಪೌರರು ಆಜ್ಞೆ ಮಾಡುವ ವಿಶೇಷ ಕಾಮಗಾರಿಗಳು, ಪಿ–2178 : ಉಪ ಮಹಾಪೌರರು ಆಜ್ಞೆ ಮಾಡುವ ವಿಶೇಷ ಕಾಮಗಾರಿಗಳು, ಪಿ–2415 : ಮೀಸಲು ನಿಧಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಕಾಮಗಾರಿ ಅನುದಾನ, ಇವುಗಳಡಿಯಲ್ಲಿ ಯಾವುದೇ ಅನುದಾನ ಲಭ್ಯವಿಲ್ಲದೇ ಇರುವುದರಿಂದ ತುರ್ತು ಕಾಮಗಾರಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಲು ಕಷ್ಟಸಾಧ್ಯವಾಗಿರುತ್ತದೆ. ಆದ್ದರಿಂದ ಪೂಜ್ಯ ಮಹಾಪೌರರು ದಿನಾಂಕ:28–11–2016ರಂದು ಟಿಪ್ಪಣಿ ನೀಡಿ, ರೂ.5000.00 ಲಕ್ಷಗಳ ತುರ್ತು ಅನುದಾನವನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ 2016–17ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆಯಡಿ ಉಪಯೋಗಿಸದೆ ಉಳಿಸಿರುವ ಅನುದಾನದಲ್ಲಿ (ಇತರೆ ಅವಶ್ಯಕ ಕಾಮಗಾರಿಗಳ ನಿರ್ವಹಣೆ/ಆರೋಗ್ಯ/ಆಡಳಿತ ವೆಚ್ಚಗಳನ್ನು ಹೊರತುಪಡಿಸಿ) ಲೆಕ್ಕಶೀರ್ಷಿಕೆ : ಪಿ–0190, ಪಿ–2178, ಪಿ–2415 ಗಳಿಗೆ ಮರುಹೊಂದಾಣಿಕೆ ಮಾಡುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ತೀರ್ಮಾನ ಕೈಗೊಳ್ಳುವ ಕುರಿತು ಟಿಪ್ಪಣಿ ಮಂಡಿಸಲಾಗಿದೆ.

**ನಿರ್ಣಯ: ಆಯುಕ್ತರವರ ದಿನಾಂಕ 26–12–2016 ರ ಟಿಪ್ಪಣಿಯನ್ನು ಒಪ್ಪುತ್ತಾ 2016–17ನೇ ಸಾಲಿನ ಆಯವ್ಯಯದ ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ಉಳಿತಾಯವಾಗುವ ಅನುದಾನದಲ್ಲಿ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಲೆಕ್ಕಶೀರ್ಷಿಕೆಗಳೊಂದಿಗೆ, ಅಧಿಕವಾಗಿ ಈ ಕೆಳಕಂಡ ಲೆಕ್ಕ ಶೀರ್ಷಿಕೆಗಳಿಗೂ ಸಹ ಹೆಚ್ಚುವರಿ ಅನುದಾನವನ್ನು ಕೆ.ಎಂ.ಸಿ. ಕಾಯಿದೆ ಸೆಕ್ಷನ್ 172ರ ಅನ್ವಯ ವರ್ಗಾವಣೆ ಮಾಡಿ ಒದಗಿಸಲು ಆಯುಕ್ತರು ಕ್ರಮಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

| ಕ್ರ.ಸ. | ಲೆಕ್ಕ ಶೀರ್ಷಿಕೆ | ಆಯವ್ಯಯ ಲೆಕ್ಕ ಶೀರ್ಷಿಕೆಗಳು | ಮೊತ್ತ [ಲಕ್ಷಗಳಲ್ಲಿ] |
|---|---|---|---|
| 1 | P0190 | ಪೂಜ್ಯ ಮಹಾಪೌರರು ಆಜ್ಞೆ ಮಾಡುವ ಕಾಮಗಾರಿಗಳು | 7500.00 |
| 2 | P2178 | ಉಪ ಮಹಾಪೌರರು ಆಜ್ಞೆ ಮಾಡುವ ವಿಶೇಷ ಕಾಮಗಾರಿಗಳು | 2500.00 |
| 3 | P2415 | ಮೀಸಲು ನಿಧಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ | 4000.00 |
| 7 | P2646 | ಸಾರ್ವಜನಿಕ ಸಂಪರ್ಕ ವಿಭಾಗದ ಜಾಹೀರಾತು ವೆಚ್ಚಗಳು | 400.00 |
| 8 | P3120 | ವಾರ್ಡ್ 171ರಲ್ಲಿ ಅಭಿವೃದ್ಧಿ ಕಾಮಗಾರಿಗಳು | 500.00 |
| 9 | P3055 | ವಾರ್ಡ್ 103 ರಲ್ಲಿ ಅಭಿವೃದ್ಧಿ ಕಾಮಗಾರಿಗಳು | 500.00 |
| 10 | P3073 | ವಾರ್ಡ್ 153 ರಲ್ಲಿ ಮಲ್ಟಿಸ್ಪೆಷಲಿಟಿ ಡಯೋಗ್ನಿಸ್ಟಿಕ್ &ರಿಸರ್ಚ್ ಕೇಂದ್ರದ ನಿರ್ಮಾಣ | 2000.00 |
| 12 | P3172 | ವಾರ್ಡ್ 91 ರಲ್ಲಿ ಅಭಿವೃದ್ಧಿ ಕಾಮಗಾರಿಗಳು | 1200.00 |
| 13 | P2959 | ಬಿ.ಟಿ.ಎಂ. ವಿಧಾನಸಭಾಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳು | 1000.00 |
| 14 | P3118 | ವಾರ್ಡ್ 29 ರಲ್ಲಿ ಅಭಿವೃದ್ಧಿ ಕಾಮಗಾರಿಗಳು | 1000.00 |
| 15 | P0486 | ಪಾಲಿಕೆಯ ರುದ್ರ ಭೂಮಿ ಮತ್ತು ವಿದ್ಯುತ್ ಚಿತಾಗಾರದ ನಿರ್ವಹಣೆ, ಅಭಿವೃದ್ಧಿ ಕಾಮಗಾರಿಗಳು | 800.00 |
| 16 | P1924 | ರಸ್ತೆ ಮತ್ತು ಮೇಲು ಸೇತುವೆ ನಿರ್ವಹಣೆ | 200.00 |
| 17 | P1926 | ಬೃಹತ್ ರಸ್ತೆಗಳು (ಬಹು ಮುಖ್ಯ ರಸ್ತೆಗಳು) | 100.00 |
| 18 | New | ವಾರ್ಡ್ ನಂ. 82, 06, 16, 44, 70, 17, 26, 13, 79, 35 | 3000.00 |

| | | | |
|---|---|---|---|
| | | ರ ಅಭಿವೃದ್ಧಿ ಕಾಮಗಾರಿಗಳು [ಪ್ರತಿ ವಾರ್ಡ್‌ಗೆ ರೂ.3.00 ಕೋಟಿ] | |
| 19 | New | ವಾರ್ಡ್ 62, 92 ಮತ್ತು 110 ರಲ್ಲಿ ಅಭಿವೃದ್ಧಿ ಕಾಮಗಾರಿಗಳು [ಪ್ರತಿ ವಾರ್ಡ್‌ಗೆ ರೂ.2.00 ಕೋಟಿ) | 600.00 |
| 20 | New | ವಾರ್ಡ್ 148ರಲ್ಲಿ ಮಲ್ಟಿಸ್ಪೆಷಲಿಟಿ ಡಯೋಗ್ನಿಸ್ಟಿಕ್ &ರಿಸರ್ಚ್ ಕೇಂದ್ರದ ನಿರ್ಮಾಣ | 500.00 |
| 21 | New | ಗಾಂಧೀನಗರ ವಿಧಾನಸಭಾಕ್ಷೇತ್ರದಅಭಿವೃದ್ಧಿ ಕಾಮಗಾರಿಗಳು | 1000.00 |
| 22 | New | ರಸ್ತೆ ಸುರಂಗ ಮಾರ್ಗಗಳ ನಿರ್ವಹಣೆ | 500.00 |
| | | | 27300.00 |

## *25]. ವಿಷಯದ ಸಂಖ್ಯೆ: ತೆಆಸ್ಥಾಸ/110/2016–17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 28.12.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 118, ಲಾಲ್‌ಬಾಗ್ ರಸ್ತೆ, ಸ್ವತ್ತಿನ ಸಂಖ್ಯೆ 150 ಇಲ್ಲಿ ಮಂಜೂರಾದ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಮಾಡಿದ್ದು, ಅನಧಿಕೃತ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ವೆಚ್ಚ ಕಾಮಗಾರಿಗಳ ಮೊತ್ತ ರೂ. 4.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ (ಚಿಕ್ಕಪೇಟೆ) ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವ ವೆಚ್ಚವನ್ನು 2016–17ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ/ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳಬೇಕಿದೆ. 2016–17ರ ಆಯವ್ಯಯದ ಅನುದಾನದ ವಿವರಗಳು ಈ ಕೆಳಕಂಡಂತಿದೆ.

| **ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" /Budget Book Page No. 111 (ರೂ. ಲಕ್ಷಗಳಲ್ಲಿ)** | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯಂತೆ ಅನುದಾನ ಅಳವಡಿಸಿಕೊಂಡಿರುವ ಮೊತ್ತ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| **150.00** | **43.78** | **193.28** | **0.55** | **4.00** |

ಜಾಬ್‌ಸಂಖ್ಯೆ ನೀಡಲು ಪ್ರಸ್ತಾವನೆ ಸಲ್ಲಿಸಿರುವ ಮೊತ್ತ ರೂ. 4.00 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.55 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುವೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016–17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016–17ರ ಲೆಕ್ಕಶೀರ್ಷಿಕೆ ಪಿ–0055 ಅಡಿ ಕೊರತೆ ಅನುದಾನ ರೂ. 4.00 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

*–ಮುಂದೂಡಿದೆ–*

***26]. ವಿಷಯದ ಸಂಖ್ಯೆ: ತೆಆಸ್ಥಾಸ/111/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 28.12.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮಾನ್ಯ ಶಾಸಕರು ಬಸವನಗುಡಿ ವಿಧಾನಸಭಾ ಕ್ಷೇತ್ರ ಇವರ ಕರ್ನಾಟಕ ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ "ವಾರ್ಡ್ ಸಂಖ್ಯೆ 156ರಲ್ಲಿ 13ನೇ ಮುಖ್ಯ ರಸ್ತೆಯಲ್ಲಿರುವ ಪಶ್ಚಿಮ ಮತ್ತು ಪೂರ್ವದ ಎರಡು ಕಡೆಯಲ್ಲಿನ ಹಾಳಾಗಿರುವ ಚರಂಡಿಯನ್ನು ಅಭಿವೃದ್ಧಿಪಡಿಸಿ ಪಾದಚಾರಿ ರಸ್ತೆ ನಿರ್ಮಾ ಮಾಡುವ ಕಾಮಗಾರಿ ಮತ್ತು ವಾರ್ಡ್ 162ರಲ್ಲಿ ಗಿರಿನಗರದ 2ನೇ ಹಂತದಲ್ಲಿ ಬರುವ 24ನೇ ಮುಖ್ಯ ರಸ್ತೆಯಲ್ಲಿನ ಸೆಕೆಂಡರಿ ಮಳೆ ನೀರಿನ ಚರಂಡಿ ಅಭಿವೃದ್ಧಿಪಡಿಸುವ 2 ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ರೂ. 35.00 ಲಕ್ಷಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರು ಅಧಿಕೃತ ಜ್ಞಾಪನ ಸಂಖ್ಯೆ ಕೆ.ಎಲ್ಎಲ್ಎಡಿಎಸ್(ಎಲ್.ಎ.ಆರ್/) ಸಿ.ಆರ್ 09/2016-17 ದಿನಾಂಕ 15-3-2016 ರಲ್ಲಿ 19 ಷರತ್ತುಗಳಿಗೆ ಒಳಪಟ್ಟು ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. ಕರ್ನಾಟಕ ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳನ್ನು ಆಯವ್ಯಯದ ಲೆಕ್ಕಶೀರ್ಷಿಕೆ "ಶಾಸಕರ ಅನುದಾನದ ಕಾಮಗಾರಿಗಳು ಪಿ0583" ಅಡಿ ಪರಿಗಣಿಸಬಹುದಾಗಿದೆ.ಕಾರ್ಯಪಾಲಕ ಅಭಿಯಂತರರು (ಬಸವನಗುಡಿ) ರವರು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ರವರಿಂದ ಅನುದಾನ ಬಿಡುಗಡೆಗೊಂಡಿರುವ ಬಗ್ಗೆ ಮಾಹಿತಿಯನ್ನು ದಾಖಲಿಸಿರುವುದಿಲ್ಲ. ಅನುದಾನ ಬಿಡುಗಡೆಗೊಂಡ ನಂತರ ನಿಯಮಾನುಸಾರ ಪಾವತಿಗೆ ಕ್ರಮವಹಿಸಬೇಕಿದೆ. 2016-17 ನೇ ಸಾಲಿನ ಆಯವ್ಯಯದಲ್ಲಿ "ಶಾಸಕರ ಅನುದಾನದ ಕಾಮಗಾರಿಗಳು ಪಿ0583" ರ' ಚಾಲ್ತಿ ಕಾಮಗಾರಿಗಳು ಅಡಿ ರೂ. 2.00 ಲಕ್ಷಗಳ ಅನುದಾನವನ್ನು ಮಾತ್ರ ಮೀಸಲಿರಿಸಿದೆ. ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಅಡಿ ಅನುಮೋದನೆಗೊಂಡಿರುವ ಮೊತ್ತ ರೂ. 35.00 ಲಕ್ಷಗಳಿದ್ದು, ಲೆಕ್ಕಶೀರ್ಷಿಕೆ ಪಿ-0583 ಅಡಿ ರೂ. 2.00 ಲಕ್ಷಗಳನ್ನು ಮೀಸಲಿರಿಸಿರುವುದರಿಂದ ಜಾಬ್‌ಸಂಖ್ಯೆ ನೀಡಲು ಅನುದಾನದ ಕೊರತೆ ಇರುತ್ತದೆ. 2016-17ರ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-0583 ಅಡಿ ರೂ. 35.00 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 28-12-2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***27]. ವಿಷಯದ ಸಂಖ್ಯೆ: ತೆಆಸ್ಥಾಸ/112/2016-17***

ಆಯುಕ್ತರ ದಿನಾಂಕ: 14-11-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,ಶ್ರೀಮತಿ. ರೇಷ್ಮಾ ಕೌಸರ್ ಎಂಬುವವರಿಗೆ ವಾರ್ಡ್ ನಂ:111ರ ವ್ಯಾಪ್ತಿಯಲ್ಲಿ ನಂ:01, ಕ್ರೆಸೆಂಟ್ ರಸ್ತೆಯಲ್ಲಿ ಬಿಬಿಎಂಪಿಯ 4x6 ಅಳತೆಯ ಜಾಗದಲ್ಲಿ ಎಸ್‌ಟಿಡಿ ಬೂತ್ ನಡೆಸಲು ಗುತ್ತಿಗೆಗೆ ನೀಡಿದ್ದು, ಗುತ್ತಿಗೆ ಅವಧಿ ನವೀಕರಿಸಲು ಶಾಂತಿನಗರ ವಿಧಾನಸಭಾ ಕ್ಷೇತ್ರದ ಶಾಸಕರು, ಅಧ್ಯಕ್ಷರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ರವರು ಸಮಿತಿ ಮುಂದೆ ಮಂಡಿಸಲು ಕೋರಿರುತ್ತಾರೆ.

ಗುತ್ತಿಗೆ ಅವಧಿ ನವೀಕರಣದ ಬಗ್ಗೆ ಜಂಟಿ ಸ್ಥಳ ಪರಿಶೀಲನಾ ವರದಿ ಸಲ್ಲಿಸುವಂತೆ ಜಂಟಿ ಆಯುಕ್ತರು (ಪೂರ್ವ) ಹಾಗೂ ಉಪ ಆಯುಕ್ತರು (ಪೂರ್ವ) ರವರು ಸೂಚಿಸಿರುವುದಾಗಿ, ಜಂಟಿ ಸ್ಥಳ ಪರಿಶೀಲನೆ ಮಾಡಿ ನಕ್ಷೆಯಲ್ಲಿ ದೃಢೀಕರಿಸಿ ದಿನಾಂಕ:01-10-2013 ರಿಂದ 30-07-2014ರ ವರೆಗೆ ಗುತ್ತಿಗೆ ಪಡೆದಿದ್ದು, ಹಾಲು ಟೀ ಮತ್ತು ಸಾಫ್ಟ್‌ಡ್ರಿಂಕ್ಸ್, ಎಸ್.ಟಿ.ಡಿ ಬೂತ್ ನಡೆಸುತ್ತಿದ್ದು, ಮುಖ್ಯ ಪಾದಚಾರಿ

ರಸ್ತೆಯಲ್ಲಿ ಇರುವುದಿಲ್ಲವೆಂದು, ಪಾದಚಾರಿಗಳಿಗೆ ಯಾವುದೇ ತೊಂದರೆಯಾಗದಂತೆ ಉಪಯೋಗಿಸಲು ಸದರಿ ಸ್ಥಳದಲ್ಲಿ ತ್ಯಾಜ್ಯವೇನಾದರೂ ಉತ್ಪತ್ತಿಯಾದಲ್ಲಿ ಬಲ್ಕ್ ಜನರೇಟರ್ ರವರಿಗೆ ಕೊಡುವ ಷರತ್ತು ವಿಧಿಸಿ ನವೀಕರಿಸಬಹುದೆಂದು ಎಇಇ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಶಾಂತಿನಗರ ರವರು ವರದಿಸಿರುತ್ತಾರೆ.

ಈ ಹಿಂದೆ ಮಾನ್ಯ ಆಯುಕ್ತರು 01–10–2013 ರಿಂದ 30–09–2014ರ ವರೆಗೆ ಮಾತ್ರ ಲೀಸ್‌ಅನ್ನು ಮುಂದುವರೆಸಿ, ನಂತರ ತೆರವುಗೊಳಿಸಲು ಆದೇಶಿಸಿರುತ್ತಾರೆ. ಆದರೆ, ಶಾಂತಿನಗರ ವಿಧಾನಸಭಾ ಕ್ಷೇತ್ರದ ಶಾಸಕರು, ಅಧ್ಯಕ್ಷರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ರವರು ಸಮಿತಿ ಮುಂದೆ ಮಂಡಿಸಲು ಕೋರಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಜಂಟಿ ಆಯುಕ್ತರು ಕಡತವನ್ನು ಮರು ಮಂಡಿಸಿರುತ್ತಾರೆ.

ಸದರಿ ಆಸ್ತಿಯು ಪಾಲಿಕೆಯ ಸ್ವತ್ತಾಗಿರುವುದರಿಂದ ಪಾಲಿಕೆಯ ಯಾವುದೇ ಸ್ವತ್ತನ್ನು ಯಾವುದೇ ಖಾಸಗಿ ವ್ಯಕ್ತಿಗೆ ನೀಡುವಾಗ ಈ ಕೆಳಕಂಡ ಕಾಯ್ದೆ ಅನ್ವಯ ಕ್ರಮವಹಿಸಬೇಕಾಗಿರುತ್ತದೆ.

1. ಕರ್ನಾಟಕ ಮುನಿಸಿಪಲ್ ಕಾಯ್ದೆ 1976ರ ಕಲಂ 176 ಹಾಗೂ 176ರ (6) ಹಾಗೂ (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ, 3 ವರ್ಷಗಳವರೆಗೂ ಗುತ್ತಿಗೆ ನೀಡುವ ಅಧಿಕಾರವು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, 5 ವರ್ಷದವರೆಗೂ ಗುತ್ತಿಗೆ ನೀಡುವ ಅಧಿಕಾರವು ಮಹಾನಗರ ಪಾಲಿಕೆಯ ಸಭೆಗೆ ಇರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಘನ ಸರ್ಕಾರಕ್ಕೆ ಅಧಿಕಾರವಿರುತ್ತದೆ.
2. <u>ಘನ ಸರ್ಕಾರವು ಆದೇಶ ಸಂಖ್ಯೆ: ನಅಇ 129 ಟಿ.ಎಂ.ಡಿ 2002 ದಿನಾಂಕ:02–06–2003 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ /ಕ್ರಯ ಆಧಾರದ ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂದು ಆದೇಶಿಸಿರುತ್ತದೆ.</u>
3. ಪಾಲಿಕೆಯ ಕೆ.ಎಂ.ಸಿ.ಕಾಯ್ದೆ 1976 ರ ನಿಯಮ 176 (6) ರಂತೆ Not with standing anything contained in this Act —

   No movable property exceeding such sum in value as may be prescribed shall be sold otherwise than by public auction;

   No property whether movable or immovable of whatever value shall be transferred free of cost or for an upset price;

   no lease of any immovable property exceeding five years shall be granted;

   no immovable property shall be disposed of by sale or by other transfer;

   Except with the previous sanction of the Government. ಎಂದಿದ್ದು,
4. ಆದರೆ, ನಅಇ 290 ಎಂಎನ್‌ಜಿ 2011, ದಿನಾಂಕ:31–05–2014 ರಂದು ನೀಡಿರುವ ನಿರ್ದೇಶನದಲ್ಲಿ ದಿನಾಂಕ:02–06–2003ರ ಸರ್ಕಾರಿ ಆದೇಶದಲ್ಲಿ ನಿರ್ದಿಷ್ಟಪಡಿಸಿರುವ ಮಾರ್ಗಸೂಚಿಯನ್ವಯ ಕ್ರಮವಹಿಸುವಂತೆ ಹಾಗೂ ಇನ್ನೂ ಮುಂದೆ ಎಲ್ಲಾ ಪ್ರಕರಣಗಳಲ್ಲೂ ಸರ್ಕಾರಿ ಆದೇಶದಂತೆ ಕ್ರಮವಹಿಸುವುದೆಂದು ನಿರ್ದೇಶಿಸಿದೆ.

ಗುತ್ತಿಗೆ ನವೀಕರಣ ಕೋರಿರುವ ಆಸ್ತಿಯ ವಿಸ್ತೀರ್ಣ 6x4 ಅಡಿಗಳಾಗಿದ್ದು, ದಿನಾಂಕ:27–10–2014ರ ಮಾರ್ಗಸೂಚಿ ದರದಂತೆ ಚದರಡಿ 1ಕ್ಕೆ ರೂ.10,000/–ಗಳು ವಾಣಿಜ್ಯಕ್ಕೆ ಶೇ 40% ಸೇರಿಸಿದಲ್ಲಿ 14,000/–

ಗಳಾಗುತ್ತದೆ. 14000x24=3,36,000/- ರೂಗಳಾಗುತ್ತದೆ. ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ ರೂ.33600/- ಗಳು ಮಾಸಿಕ ರೂ.2800/- ಗಳಾಗುತ್ತದೆ. (ದಿನಾಂಕ:01-10-2014 ರಿಂದ 31-03-2016). ದಿನಾಂಕ:01-04-2016ರ ಮಾರ್ಗಸೂಚಿ ದರದಂತೆ (01-04-2016 ರಿಂದ 30-09-2017) ಮಾರ್ಗಸೂಚಿ ದರವು ಚ.ಮೀಟರ್ 1ಕ್ಕೆ 1,18,400/10.76= ಚ.ಅ 1ಕ್ಕೆ (11003.71) ರೂ.11004/- ಗಳಾಗುತ್ತದೆ. ವಾಣಿಜ್ಯಕ್ಕೆ ಶೇ 40% ರಷ್ಟು ಸೇರಿಸಿದಲ್ಲಿ ರೂ.4402/- 11004+4402=15406/- ರೂಗಳುx24 ಚ.ಅಡಿಗಳಿಗೆ 3,69,744/- ರೂಗಳಾಗುತ್ತದೆ. ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ ರೂ.36,974/- ಗಳು ಮಾಸಿಕ ರೂ.3081/- ಗಳಾಗುತ್ತದೆ.

ಮೇಲೆ ವಿವರಿಸಿರುವ ಮಾರ್ಗಸೂಚಿಗಳು ಹಾಗೂ ಸುತ್ತೋಲೆಗಳನ್ವಯ ಸದರಿ ಮನವಿಯನ್ನು ಪರಿಗಣಿಸಲು ಅವಕಾಶವಿರುವುದಿಲ್ಲವೆಂಬ ಅಂಶವನ್ನು ಸ್ಥಾಯಿ ಸಮಿತಿಗಳ ಅವಗಾಹನೆಗೆ ಮಂಡಿಸಲಾದ **ದಿನಾಂಕ: 14-11-2016ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಕುರಿತು ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಶ್ರೀಮತಿ ರೇಷ್ಮಾ ಕೌಸರ್‌ರವರಿಗೆ ಉಪಜೀವನದ ಹಿತದೃಷ್ಟಿಯಿಂದ 3 ವರ್ಷಗಳ ಅವಧಿಗೆ ಗುತ್ತಿಗೆ ಅವಧಿಯನ್ನು ನವೀಕರಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 19.12.2016ರ ಸಭೆಯ ನಿರ್ಣಯ.**

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 19-12-2016ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.3081/- (ರೂ.ಮೂರು ಸಾವಿರದ ಎಂಭತ್ತೊಂದು ಮಾತ್ರ) ಗಳಿಗೆ ಗುತ್ತಿಗೆಯನ್ನು ನಿಗದಿಪಡಿಸಲು ಸಮಿತಿಯು ತೀರ್ಮಾನಿಸಿತು.**

## ***28]. ವಿಷಯದ ಸಂಖ್ಯೆ: ತೆಆಸ್ಥಾಸ/113/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 28-11-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೆಂಗಳೂರು ಮಹಾನಗರ ಪಾಲಿಕೆಯ ನಗರ ಯೋಜನೆ ಸ್ಥಾಯಿ ಸಮಿತಿ ಮತ್ತು ತೆರಿಗೆ ಆರ್ಥಿಕ ಸ್ಥಾಯಿ ಸಮಿತಿಗೆ ಗುಬ್ಬಿ ವೀರಣ್ಣ ರಂಗಮಂದಿರವನ್ನು ಬಾಡಿಗೆ ನೀಡುವ ಬಗ್ಗೆ ಟೆಂಡರ್ ಕಂ. ಸಾರ್ವಜನಿಕ ಹರಾಜಿನ ಮೂಲಕ ನೀಡುವ ಬಗ್ಗೆ ಅನುಮೋದನೆಯನ್ನು ನೀಡುವ ಕುರಿತು ಟಿಪ್ಪಣಿ ಮಂಡಿಸಿದೆ.

ಗಾಂಧಿನಗರ ವಿಭಾಗದ ವಾರ್ಡ್ ಸಂಖ್ಯೆ: 94ರ ವ್ಯಾಪ್ತಿಗೆ ಒಳಪಡುವ ಗುಬ್ಬಿ ವೀರಣ್ಣ ರಂಗಮಂದಿರವನ್ನು ಈ ಹಿಂದೆ ಕರ್ನಾಟಕ ಕಲಾ ವೈಭವ ಸಂಘಕ್ಕೆ ನಾಟಕ ಪ್ರದರ್ಶಿಸುವ ಸಲುವಾಗಿ ಮಹಿಳಾ ರಂಗ ಸಂಘಟಕಿ ಮತ್ತು ಹಿಂದುಳಿದ ವರ್ಗದ ಮಹಿಳೆಯಾದ ಶ್ರೀಮತಿ ಮಾಲತಿ ಸುಧೀರ್ ರವರಿಗೆ ಮಾಹಿಯಾನ ರೂ 61,500/- ರಂತೆ ಬಾಡಿಗೆ ನೀಡಲಾಗಿತ್ತು.

ಮುಂದುವರೆದಂತೆ ಸದರಿ ಕಲಾ ಮಂದಿರವನ್ನು ನವೀಕರಿಸಿ, ಛಾವಣಿ ಮತ್ತು ಆಸನಗಳನ್ನು ದುರಸ್ಥಿಗೊಳಿಸಿ ಸದರಿ ರಂಗಮಂದಿರವನ್ನು ಮಾಸಿಕ ರೂ. 75,000/- ರಂತೆ ಹಾಗೂ ಎರಡು ತಿಂಗಳ ಬಾಡಿಗೆಯನ್ನು ಭದ್ರಾತಾ ಠೇವಣಿಯಾಗಿ ರೂ. 1,50,000/- ಗಳನ್ನು ಪಡೆಯಲು ಪ್ರಸ್ತಾವನೆಯನ್ನು ನಗರ ಯೋಜನೆ ಮತ್ತು ಅಭಿವೃದ್ದಿ ಸ್ಥಾಯಿ ಸಮಿತಿಯ ಮುಂದೆ ವಿಷಯದ ಸಂಖ್ಯೆ ನಯೋಅಸ್ಥಾಸ/01/2016-17 ದಿನಾಂಕ 26-06-2016ರಂದು ನಡೆದ ಸಭೆಯಲ್ಲಿ ಚರ್ಚಿಸಲಾಗಿದ್ದು, ಗಾಂಧಿನಗರದಲ್ಲಿ ಇರುವ ಗುಬ್ಬಿ ವೀರಣ್ಣ ರಂಗಮಂದಿರವನ್ನು ಸರ್ಕಾರದ ಆದೇಶದಂತೆ ಬಾಡಿಗೆಗೆ ಅಥವಾ ಸಾರ್ವಜನಿಕ ಹರಾಜು ಮೂಲಕ ನೀಡಲು ಸಮಿತಿಯಲ್ಲಿ ತಿರ್ಮಾನಿಸಲಾಗಿರುತ್ತದೆ.

ಈ ವಿಷಯಕ್ಕೆ ಸಂಬಂಧಪಟ್ಟಂತೆ ಸದರಿ ರಂಗ ಮಂದಿರಕ್ಕೆ ಪ್ರತಿ ಮಾಹೆ ರೂ. 61,500/ ಮೊತ್ತವನ್ನು ನೀಡಲಾಗುತ್ತಿದ್ದು, ಈಗ ಈ ಬಾಡಿಗೆಗೆ ಶೇ25.00 ರಷ್ಟು ಹೆಚ್ಚಿಸಿದಲ್ಲಿ ಒಟ್ಟು ಮೊತ್ತ ರೂ. 76,875/– ಆಗುತ್ತದೆ ಮತ್ತು ಈ ಪ್ರಸ್ತಾವನೆಯನ್ನು ಪುನಃ ಸಮಿತಿಯ ಮುಂದೆ ಮರು ಪರಿಶೀಲನೆಗಾಗಿ ಮಂಡಿಸಲಾಗಿರುವ ದಿನಾಂಕ: 18.11.2016ರ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಯನ್ನು ಸುಧೀರ್ಘವಾಗಿ ಚರ್ಚಿಸಲಾಗಿ ಸರ್ಕಾರದ ಆದೇಶದಂತೆ ನಿಯಮಾನುಸಾರ ಬಾಡಿಗೆ ಅಥವಾ ಸಾರ್ವಜನಿಕ ಹರಾಜು ಮೂಲಕ ನೀಡಲು ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 19.12.2016ರ ಸಭೆಯ ನಿರ್ಣಯ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 28.11.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

### ***29]. ವಿಷಯದ ಸಂಖ್ಯೆ: ತೆಆಸ್ಥಾಸ/114/2016–17***

ಆಯುಕ್ತರ ದಿನಾಂಕ: 20–08–2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ:172, ಮಡಿವಾಳ ವಲಯ ವ್ಯಾಪ್ತಿಯ ಬಿಟಿಎಂ ಬಡಾವಣೆ 1ನೇಹಂತ, ನಾಗರೀಕ ಹಿತರಕ್ಷಣಾ ವೇದಿಕೆ (ರಿ), ರವರಿಗೆ 3 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ವೇದಿಕೆ ಯವರಿಗೆ ಸ್ವಂತ ಕಛೇರಿ ಇಲ್ಲದಿರುವುದರಿಂದ ವಾರ್ಡ್–172, ಮಡಿವಾಳ ವ್ಯಾಪ್ತಿಯಲ್ಲಿ ಬರುವ ಸಂಪರ್ಕ ಕಛೇರಿಯ ಬಳಿ ಹೊಸದಾಗಿ ನಿರ್ಮಿಸಿರುವ ಬಿಬಿಎಂಪಿಯ ಕಟ್ಟಡದಲ್ಲಿ ವೇದಿಕೆಗಾಗಿ 3 ವರ್ಷಗಳ ಅವಧಿಗೆ ಗುತ್ತಿಗೆ ಅಥವಾ ಬಾಡಿಗೆ ಆಧಾರದಲ್ಲಿ ಸ್ಥಳಾವಕಾಶ ಒದಗಿಸಲು ಕೋರಿರುತ್ತಾರೆ.

ಸದರಿ ವೇದಿಕೆಯವರು ಪ್ರತಿ ವರ್ಷ ಗಣರಾಜ್ಯೋತ್ಸವ, ಸ್ವಾತಂತ್ರ್ಯೋತ್ಸವ ಮತ್ತು ಕನ್ನಡ ರಾಜ್ಯೋತ್ಸವಗಳನ್ನು ಆಚರಿಸುವಲ್ಲಿ ಇತರೆ ಸಂಘ ಸಂಸ್ಥೆಗಳಿಗೆ ಮಾದರಿ ಹಾಗೂ ಮಾರ್ಗದರ್ಶಿಯಾಗಿ ರವರು ಈ ವೇದಿಕೆಯು ಬಡಾವಣೆಯ ನಾಗರೀಕರ ಹಿತರಕ್ಷಣೆಗೆ ಮತ್ತು ಯೋಗಕ್ಷೇಮಗಳಿಗೆ ಕಾಲಕಾಲಕ್ಕೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದು, ಬಡಾವಣೆಯ ನಾಗರೀಕರ ಹಾಗೂ ಸರ್ಕಾರದ ವಿವಿಧ ಇಲಾಖೆಗಳ ಮಧ್ಯೆ ಸ್ನೇಹ ಸೇತುವಾಗಿ ಕಾರ್ಯನಿರ್ವಹಿಸುತ್ತಿದೆ. ಉತ್ಸವಗಳು, ಉಚಿತ ಆರೋಗ್ಯ ನೇತ್ರ ಹಾಗೂ ಹೃದ್ರೋಗ ತಪಾಸಣೆ, ರಕ್ತದಾನ ಕಾರ್ಯಕ್ರಮ, ಶಾಲೆಯ ಬಡ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕಗಳನ್ನು ಸಮವಸ್ತ್ರಗಳನ್ನು ವಿತರಿಸುತ್ತಿದ್ದು, ಬಡಾವಣೆಯ ಎಸ್.ವಿ.ಶಾಲೆಯಲ್ಲಿ (2) ಇಬ್ಬರು ಬಡ ವಿದ್ಯಾರ್ಥಿಗಳನ್ನು ದತ್ತು ಪಡೆದುಕೊಂಡು ಸಕಾಲ ವಿದ್ಯಾಭ್ಯಾಸದ ವೆಚ್ಚವನ್ನು ಭರಿಸುತ್ತಿದ್ದು ಹಾಗೂ ಪಾಲಿಕೆಯೊಡನೆ ಸಹಭಾಗಿಗಳಾಗಿ – ಜಾಗೃತಿ, ಕಸ ವಿಂಗಡಣೆ ವಿಲೇವಾರಿ ಬಗ್ಗೆ ನಾಗರೀಕರಲ್ಲಿ ಜಾಗೃತಿ ಕಾರ್ಯಕ್ರಮ, ಚಟುವಟಿಕೆಗಳನ್ನು ನಡೆಸಲು ಸದರಿ ವೇದಿಕೆಗೆ ಸ್ವಂತ ಕಟ್ಟಡದ ಅವಶ್ಯಕತೆ ಇರುವುದರಿಂದ ವಾರ್ಡ್–172 ರಲ್ಲಿ ಸಂಪರ್ಕ ಕೇಂದ್ರದ ಬಳಿ ಹೊಸದಾಗಿ ನಿರ್ಮಿಸಿರುವ ಕಟ್ಟಡದಲ್ಲಿ ವೇದಿಕೆ ಕಛೇರಿಗೆ ಕೆಲಸ ನಿರ್ವಹಿಸಲು 3 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ಕೋರಿಕೊಂಡಿರುತ್ತಾರೆ.

ಜಂಟಿ ಆಯುಕ್ತರು (ದಕ್ಷಿಣ) ರವರು ಸದರಿ ಕಟ್ಟಡವು ಪಾರ್ಕ್ ಆವರಣದಲ್ಲಿದೆಯೇ ಎಂದು ಪರಿಶೀಲಿಸಿ ವರದಿ ನೀಡಲು ಸೂಚಿಸಿರುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು ದಾಖಲಾತಿ ಹಾಗೂ ಸ್ಥಳ ಪರಿಶೀಲಿಸಿ ವಾರ್ಡ್–172 ಮಡಿವಾಳ ನಕಾಶೆಯಲ್ಲಿ ಹಳದಿ ಬಣ್ಣದಿಂದ ಗುರುತಿಸಿರುವ ಕ್ಯಾಶಿಸಿರ್ ಲೇಔಟ್‌ನ ಬಿಬಿಎಂಪಿ ಜಾಗವು ಹೆಸರಿಗೆ ಮಾತ್ರ ಪಾರ್ಕ್ ಎಂದು ನಮೂದಿಸಲಾಗಿದ್ದು, ಸ್ಥಳದಲ್ಲಿ ಗಾಡಿ ಮನೆ ಜಿಮ್ ಒಣತ್ಯಾಜ್ಯ ಸಂಗ್ರಹಣಾ ಘಟಕ ಹಾಗೂ ಬಿಬಿಎಂಪಿ ತೆರಿಗೆ ಕೇಂದ್ರ ಕಛೇರಿಗಳು ಕಾರ್ಯನಿರ್ವಹಿಸುತ್ತಿರುವೆಂದು ವರದಿಸಿರುತ್ತಾರೆ. ಮಡಿವಾಳ ವ್ಯಾಪ್ತಿಯ ಸಂಪರ್ಕ ಕೇಂದ್ರದ ಪಕ್ಕದಲ್ಲಿ ಹೊಸದಾಗಿ ಕಟ್ಟಿರುವ ಕಟ್ಟಡದಲ್ಲಿ 23.3x19 ಅಳತೆಯ ಕೊಠಡಿಯನ್ನು 3 ವರ್ಷಗಳ ಅವಧಿಗೆ

ನಿಯಮಾನುಸಾರ ಗುತ್ತಿಗೆ ನೀಡಲು ಯಾವುದೇ ಆಕ್ಷೇಪಣೆ ಇಲ್ಲವೆಂದು ಸದರಿ ಪಾಲಿಕೆ ಕಟ್ಟಡದ ನಕ್ಷೆಯನ್ನು ತಯಾರಿಸಿ ಕಡತದಲ್ಲಿ ಮಂಡಿಸಿರುತ್ತಾರೆ. ಪ್ರಶ್ನಿತ ಸ್ವತ್ತನ್ನು ಆಸ್ತಿ ವಹಿ ಸಂಖ್ಯೆ:33, ಪುಟ ಸಂಖ್ಯೆ:56 ರಲ್ಲಿ ದಾಖಲಿಸಲಾಗಿದ್ದು, ಉದ್ಯಾನವನ ಮತ್ತು ಸಂಪರ್ಕ ಕೇಂದ್ರ ಎಂದು ನಮೂದಿಸಲಾಗಿರುತ್ತದೆ.

ಘನ ಸರ್ಕಾರವು ಆದೇಶ ಸಂಖ್ಯೆ: ನಅಇ 129 ಟಿ.ಎಂ.ಡಿ 2002 ದಿನಾಂಕ:02–06–2003 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂದು ಆದೇಶಿಸಿರುತ್ತದೆ.

THE KARNATAKA PARKS, PLAY-FIELDS AND OPEN SPACES (PRESERVATION AND REGULATION) ACT, 1985

1. Prohibition of the use of parks, play-fields and open spaces in certain cases.- No park, play-field or open space specified in the list published under section 4 or section 5 shall be used for any purpose other than the purpose or purposes for which it was used on the date of commencement of this Act in such area.

8. Prohibition of construction of buildings etc.-

(1) No person shall construct any building or put up any structure likely to affect the utility of the park, play-field or open space or make any encroachment in or over any park, play-field or open space specified in the list published under section 4 or section 5 :

Provided that the executive authority may, subject to such rules as may be prescribed, permit the construction of such buildings or putting up of such structures as may be necessary for the improvement or more beneficial utilisation of the park, play-field or open space.

(2) No land or building within a park, play-field or open space specified in the list published under section 4 or section 5 shall be alienated by way of sale, lease, gift, exchange, mortgage or otherwise and no licence for the use of any such land or buildings for any other purposes shall be granted and any alienation made or licence granted in contravention of this section shall be null and void.

ದಿ:02–06–2003ರ ಘನ ಸರ್ಕಾರದ ಆದೇಶದಂತೆ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಗುತ್ತಿಗೆಯನ್ನು ನೀಡುವಂತಿದ್ದರೆ ಅದನ್ನು ಸಾರ್ವಜನಿಕ ಹರಾಜು ಮುಖೇನವೇ ಕ್ರಮವಿಡಬೇಕಿರುತ್ತದೆ. ಮೇಲ್ಕಾಣಿಸಿದ ಉದ್ಯಾನವನ ಸಂರಕ್ಷಣೆ ಮತ್ತು ರೆಗ್ಯುಲೇಷನ್ 8 (1) (2)ರ ಕಾಯ್ದೆಯಂತೆ ಹಾಲಿ ಪ್ರಸ್ತಾವನೆಗೆ ಅವಕಾಶವಿರುವುದಿಲ್ಲ. ಆದರೆ, ಈ ಕಡತದ ಕಂಡಿಕೆ (16) ರಲ್ಲಿ ಸ.ಕ.ಅ (ಬಿ.ಟಿ.ಎಂ.ಲೇಔಟ್) ನವರು ವರದಿಸಿರುವಂತೆ ಸದರಿ ಪಾರ್ಕ್ ಹೆಸರಿಗೆ ಮಾತ್ರ ಉದ್ಯಾನವನವೆಂದು ನಮೂದಿಸಿದ್ದು, ಸದರಿ ಸ್ವತ್ತಿನಲ್ಲಿ ಗರಡಿ ಮನೆ, ಒಣತ್ಯಾಜ್ಯ ಸಂಗ್ರಹಣಾ ಘಟಕ ಹಾಗೂ ತೆರಿಗೆ ಸಂಗ್ರಹಣಾ ಕಛೇರಿಗಳಿರುವ ಬಗ್ಗೆ ವರದಿಸಿರುತ್ತಾರೆ. ಅಧಿಸೂಚನೆಯಲ್ಲಿ ಸದರಿ ಪ್ರದೇಶವನ್ನು ಉದ್ಯಾನವನವೆಂದು ಪರಿಗಣಿಸಿ ಅಧಿಸೂಚಿಸಿರುವುದರಿಂದ ಮುಂದಿನ ಅಧಿಸೂಚನೆಯಲ್ಲಿ ಕಾರಣಗಳನ್ನು ನೀಡಿ ಈ ಪ್ರದೇಶವನ್ನು ಉದ್ಯಾನವನದಿಂದ ಕೈಬಿಟ್ಟು ಘನ ಸರ್ಕಾರದಲ್ಲಿ ಅನುಮೋದಿಸಿಕೊಂಡು ನಂತರ ದಿ:02–06–2003ರ ಆದೇಶದಂತೆ ಕ್ರಮವಿಡುವುದು ನಿಯಮಾನುಸಾರ ಕ್ರಮವಾಗಿರುತ್ತದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆ ಮುಂದೆ ಮಂಡಿಸಿಕೊಂಡು ಸೂಕ್ತ ತೀರ್ಮಾನ

ಕೈಗೊಂಡು ಸಕ್ಷಮ ಪ್ರಾಧಿಕಾರವಾದ ಘನ ಸರ್ಕಾರಕ್ಕೆ ಮಂಡಿಸಲು ಸಲ್ಲಿಸಿರುವ ದಿನಾಂಕ: 20–08–2016ರ ಮಾನ್ಯ ಆಯುಕ್ತರ ಟಿಪ್ಪಣಿಯ ಕುರಿತು ಸಮಿತಿಯ ಸದಸ್ಯರು & ಅಧಿಕಾರಿಗಳೊಂದಿಗೆ ಚರ್ಚಿಸಿ, ಪರಿಶೀಲಿಸಿ, ನಾಗರೀಕ ಹಿತ ರಕ್ಷಣಾ ವೇದಿಕೆ (ರಿ) ಬಿ.ಟಿ.ಎಂ. ಬಡಾವಣೆ 1ನೇ ಹಂತ ರವರು ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದರಿಂದ 3 ವರ್ಷಗಳ ಅವಧಿಗೆ 23.3x19 ಅಡಿಗಳ ಕೊಠಡಿಯನ್ನು ಗುತ್ತಿಗೆ ಆಧಾರದ ಮೇಲೆ ವಹಿಸಿಕೊಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 19.12.2016ರ ಸಭೆಯ ನಿರ್ಣಯ.

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 19–12–2016ರ ನಿರ್ಣಯವನ್ನು ಒಪ್ಪುತ್ತಾ, ವಾರ್ಷಿಕ ರೂ.2000/– (ರೂ. ಎರಡು ಸಾವಿರ ಮಾತ್ರ) ಗಳ ಗುತ್ತಿಗೆಯನ್ನು ನಿಗದಿಪಡಿಸಲು ಸಮಿತಿಯು ತೀರ್ಮಾನಿಸಿತು.**

***30]. ವಿಷಯದ ಸಂಖ್ಯೆ: ತೆಆಸ್ಥಾಸ/115/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 02.01.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, Drilling of Borwells with Pipeline at Various Places in Kaveripura ಅನುದಾನದ ಮೊತ್ತ ರೂ.25.00 ಲಕ್ಷಗಳಿಗೆ ಲೆಕ್ಕಶೀರ್ಷಿಕೆ ಪಿ2201 (Assembly Constiuency Development Work under BBMP) ದಿನಾಂಕ: 06.03.2013 ರಂದು ನೀಡಲಾಗಿದ್ದು, ಆಡಳಿತಾತ್ಮಕ ಅನುಮೋದನೆ ದಿ:07.03.2013 ಹಾಗೂ ತಾಂತ್ರಿಕ ಮಂಜೂರಾತಿ ದಿ:08.03.2013 ನೀಡಲಾಗಿದ್ದು, ವಲಯದ ಅಧಿಕಾರಿಗಳು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾರ್ಯಾದೇಶವನ್ನು ಮೆ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆಯವರಿಗೆ ಸಂಖ್ಯೆ:52/12–13, ದಿ:18.03.2013 ರಂದು ನೀಡಲಾಗಿರುತ್ತದೆ. ಮುಖ್ಯ ಅಭಿಯಂತರರು (ಪಶ್ಚಿಮ) ರವರು ಕಾಮಗಾರಿಯು ಪೂರ್ಣಗೊಂಡಿರುತ್ತದೆ ಎಂದು ಕಂಡಿಕೆ (8/13)ರಲ್ಲಿ ವಿವರಣೆ ನೀಡಿದ್ದು ಡಿ–ಫ್ರೀಜ್ ಮಾಡಲು ಕೋರಿರುತ್ತಾರೆ. ಮುಖ್ಯಲೆಕ್ಕಾಧಿಕಾರಿ ರವರು ಲೆಕ್ಕಶೀರ್ಷಿಕೆ ಪಿ2201ರಲ್ಲಿ 2016–17ನೇ ಸಾಲಿನಲ್ಲಿ ಮೀಸಲಿಟ್ಟಿರುವ ಮೊತ್ತವು ಈಗಾಗಲೇ ಪಾವತಿಯಾಗಿದ್ದು, ಈಗ ಯಾವುದೇ ಅನುದಾನ ಇರುವುದಿಲ್ಲವೆಂದು ಕಂಡಿಕೆ (20/24) ರಲ್ಲಿ ವರದಿ ಮಂಡಿಸಿರುತ್ತಾರೆ. ಮಾನ್ಯ ಆಯುಕ್ತರು ಕಂಡಿಕೆ (29)ರಲ್ಲಿ ಅನುದಾನದ ಲಭ್ಯತೆಯ ಆಧಾರದ ಮೇಲೆ ಸದರಿ ಕಾಮಗಾರಿಯನ್ನು ಡಿ–ಫ್ರೀಜ್ ಮಾಡಬಹುದೆಂದು ಸೂಚಿಸಿರುವ ಹಿನ್ನಲೆಯಲ್ಲಿ ಅನುದಾನದ ಮರು ಹೊಂದಾಣಿಕೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 02.01.2017ರ ಟಿಪ್ಪಣಿಯನ್ನು ಒಪ್ಪುತ್ತಾ, 2016–17ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅನುದಾನವನ್ನು ಒದಗಿಸಲು ಕ್ರಮಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

***ಹೆಚ್ಚುವರಿ ವಿಷಯಗಳು:–***

***31]. ವಿಷಯದ ಸಂಖ್ಯೆ: ತೆಆಸ್ಥಾಸ/116/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 04.01.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮುಖ್ಯ ಅಭಿಯಂತರರು (ಯೋಜನೆ–ಕೇಂದ್ರ) ವಿಭಾಗದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದರಲ್ಲಿ ಹಲವಾರು ಯೋಜನೆಗಳಲ್ಲಿ ಭೂಸ್ವಾಧೀನ ಮೊತ್ತ

ಮೀಸಲಿಡಲಾಗದ ಕಾರಣ ಕಾಮಗಾರಿಗಳನ್ನು ಪೂರ್ಣಗೊಳಿಸಲು ವಿಳಂಬವಾಗುತ್ತಿದೆ. ಸದರಿ ಯೋಜನೆಗಳ ಪಟ್ಟಿ ಈ ಕೆಳಗಿನಂತಿರುತ್ತದೆ.

| ಕ್ರ. ಸಂ | ಯೋಜನೆಯ ಹೆಸರು | ಯೋಜನೆಗೆ ಬೇಕಾಗಿರುವ ಭೂಸ್ವಾಧೀನ ವಿಸ್ತೀರ್ಣ (ಚ. ಮೀ) | ಭೂಸ್ವಾಧೀನಕ್ಕೆ ಬೇಕಾಗಿರುವ ಮೊತ್ತ (ರೂ. ಕೋಟಿಗಳಲ್ಲಿ) |
|---|---|---|---|
| 1 | ಜಕ್ಕೂರು, ಚನ್ನಸಂದ್ರ ಯಲಹಂಕ ನಿಲ್ದಾಣ – ಧರ್ಮವರಂ ವಿಭಾಗ ಎಲ್.ಸಿ. ನಂ. 11ಎ ರೈಲ್ವೇ ಕಿ.ಮೀ 13/300–400 ಬಳಿ ಆರ್.ಓ.ಬಿ. ನಿರ್ಮಾಣ ಕಾಮಗಾರಿ (ವೆಚ್ಚ ಹಂಚಿಕೆಯ ಕಾಮಗಾರಿ) | 10,000.00 | 50.00 |
| 2 | ಕೊಡಿಗೆಹಳ್ಳಿ ಯಶವಂತಪುರ ಯಲಹಂಕ ನಿಲ್ದಾಣ ಎಲ್.ಸಿ. ನಂ. 10ಬಿ ಬಳಿ ಆರ್.ಯು.ಬಿ. ನಿರ್ಮಾಣ ಕಾಮಗಾರಿ (ವೆಚ್ಚ ಹಂಚಿಕೆಯ ಕಾಮಗಾರಿ). | 5224.00 | 60.00 |
| 3 | ಸರ್ಕಾರಿ ಸಾಬೂನು ಕಾರ್ಖಾನೆ ಜಂಕ್ಷನ್‌ನಿಂದ ಮಾಗಡಿ ರಸ್ತೆ ಡಿವಿಯೇಶನ್ ರಸ್ತೆ ಜಂಕ್ಷನ್ ವರೆಗೆ ಡಾ// ರಾಜ್‌ಕುಮಾರ್ ರಸ್ತೆಯ ಸಿಗ್ನಲ್ ಮುಕ್ತ ಕಾರಿಡಾರ್ ನಿರ್ಮಾಣ ಕಾಮಗಾರಿ. (ವಿವೇಕಾನಂದ ಕಾಲೇಜು ಜಂಕ್ಷನ್) | 1191.00 | 11.70 |
| 4 | ಬಿಟಿಎಂ ಬಡಾವಣೆಯಿಂದ ಹೊಸೂರು ರಸ್ತೆವರೆಗೆ ಮಡಿವಾಳ ಕೆರೆಯ ಏರಿಯ ಮೇಲೆ 20ಮೀ. ಅಗಲದ ರಸ್ತೆ ನಿರ್ಮಾಣ | 5210.37 | 29.56 |
| 5 | ರಾಜಾಜಿನಗರ ಕಾರ್ಡ್ ರಸ್ತೆಯಲ್ಲಿ ಬಸವೇಶ್ವರನಗರ ಮುಖ್ಯರಸ್ತೆ, ಮಂಜುನಾಥನಗರ 1ನೇ ಮುಖ್ಯರಸ್ತೆ ಮತ್ತು ಶಿವನಗರ 1ನೇ ಮತ್ತು 8ನೇ ಮುಖ್ಯರಸ್ತೆಗಳನ್ನೊಳಗೊಂಡಂತೆ ರಸ್ತೆ ವಿಭಜಕಗಳ ನಿರ್ಮಾಣ ಕಾಮಗಾರಿ | 75.00 | 1.00 |
| 6 | ಟೆಂಡರ್ ಶ್ಯೂರ್ ಯೋಜನೆ (ಪ್ಯಾಕೇಜ್–3) | 100.00 | 2.50 |
| 7 | 8 ಪಥದ ಕಾರಿಡಾರ್ ಓಕಳಿಪುರಂ ಜಂಕ್ಷನ್ ನಿಂದ ಫೌಂಟೇನ್ ಸರ್ಕಲ್ ವರೆಗಿನ ನಿರ್ಮಾಣ ಕಾಮಗಾರಿ. | 385.00 | 7.00 |
| | ಒಟ್ಟು | 22047.37 | 161.76 |

ಮುಂದುವರೆದು ದಿನಾಂಕ: 14–12–2016 ರಂದು ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿರವರ ಅಧ್ಯಕ್ಷತೆಯಲ್ಲಿ ನಡೆದ ಬಿಬಿಎಂಪಿ ಸಾರ್ವಜನಿಕ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಮಾರ್ಗ ಸೂಚಿಗಳ ಸಭೆಯಲ್ಲಿ ಮುಖ್ಯ ಅಭಿಯಂತರರು (ಯೋಜನೆ–ಕೇಂದ್ರ) ರವರು ತಮ್ಮ ವಿಭಾಗದಲ್ಲಿ ಹಲವಾರು ಪ್ರಮುಖ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದ್ದು ಅದರಲ್ಲಿ ಹಲವಾರು ಯೋಜನೆಗಳಿಗೆ ಖಾಸಗಿ ಸ್ವತ್ತುಗಳು ಅವಶ್ಯಕತೆ ಇರುತ್ತದೆ ಇದರಲ್ಲಿ ಬಹುತೇಕ ರೈಲ್ವೆ ಮೇಲ್ಸೇತುವೆ ಮತ್ತು ರೈಲ್ವೆ ಕೆಳಸೇತುವೆ ಯೋಜನೆಗಳಿದ್ದು, ಇದಕ್ಕಾಗಿ ಖಾಸಗಿ ಸ್ವತ್ತುಗಳನ್ನು ಟಿ.ಡಿ.ಅರ್ ಮೂಲಕ ಭೂಸ್ವಾಧೀನ ಪಡಿಸಿಕೊಳ್ಳಲು ಮಾಲಿಕರು ನಿರಾಕರಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಕೆ.ಎಂ.ಸಿ ಕಾಯ್ದೆ ಕಾಲಂ 175 ರಲ್ಲಿ ಖಾಸಗಿ ಸ್ವತ್ತುಗಳನ್ನು ನೇರವಾಗಿ ಖರೀದಿಸಲು ಪ್ರಕ್ರಿಯೆ ಚಾಲ್ತಿಯಲ್ಲಿದ್ದು ಇದಕ್ಕೆ ಅನುದಾನ ಅವಶ್ಯಕತೆ ಇರುತ್ತದೆ ಹಾಗೂ ಸದರಿ ಮೊತ್ತವನ್ನು ಭರಿಸಲು ಅನುದಾನ ಕೊರತೆ ಇರುವುದಾಗಿ ಸಭೆಯಲ್ಲಿ ತಿಳಿಸಲಾಯಿತು.

ಇದರ ಅನ್ವಯ ಮಾನ್ಯ ಅಧ್ಯಕ್ಷರು ಮೇಲೆ ತಿಳಿಸಿರುವ ಕಾಮಗಾರಿಗೆ ಭೂಸ್ವಾಧೀನಕ್ಕೆ ಬೇಕಾಗಿರುವ ಮೊತ್ತಗಳ ವಿವರಗಳನ್ನು ನೀಡಲು ಸೂಚಿಸಿರುತ್ತಾರೆ ಹಾಗೂ ಈ ಕಾಮಗಾರಿಗಳಿಗೆ ಭೂಸ್ವಾಧೀನಕ್ಕೆ

ಬೇಕಾಗಿರುವ ಮೊತ್ತವನ್ನು ಬಿಬಿಎಂಪಿ ಆಯವ್ಯಯ 2016–17ನೇ ಸಾಲಿನಲ್ಲಿ ಮರು ಹೊಂದಾಣಿಕೆ (Reappropriation) ಮಾಡಿ ಒದಗಿಸಲಾಗುವುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಮೇಲೆ ತಿಳಿಸಿರುವ ಯೋಜನೆಗಳಿಗೆ ಪಾಲಿಕೆಯ ಆಯವ್ಯಯದಲ್ಲಿ ಮರುಹೊಂದಾಣಿಕೆ ರೂ.161.76 ಕೋಟಿಗಳ ಮೊತ್ತವನ್ನು ಭೂಸ್ವಾಧೀನ ವೆಚ್ಚಕ್ಕೆ ಮೀಸಲಿಡುವ ಬಗ್ಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ.

**<u>ನಿರ್ಣಯ:</u> ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ 2–1–2017ರ ಟಿಪ್ಪಣಿಯನ್ನು ಒಪ್ಪುತ್ತಾ,**

| | | |
|---|---|---|
| **1** | **ಮುಖ್ಯಅಭಿಯಂತರರು (ಯೋಜನೆ ಕೇಂದ್ರ) ವಿಭಾಗದಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳಿಗೆ ಭೂ ಸ್ವಾಧೀನಕ್ಕೆ ಪ್ರಸ್ತಾಪಿಸಿರುವ ರೂ.161.76 ಕೋಟಿಗಳಲ್ಲಿ ಟಿಪ್ಪಣಿ ಹಾಳೆ ಪುಟ 2 ರಲ್ಲಿ ಕ್ರಮ ಸಂಖ್ಯೆ 4 ರಲ್ಲಿನ ರೂ.29.56 ಕೋಟಿಗಳನ್ನು ರೂ.56.00 ಕೋಟಿಗೆ ಮಾರ್ಪಾಡು ಮಾಡಿ ಒಟ್ಟಾರೆ ವೆಚ್ಚವನ್ನು ರೂ.187.76 ಕೋಟಿಗಳಿಗೆ ಪರಿಷ್ಕರಿಸಿದೆ.** | **187.76 ಕೋಟಿಗಳು** |

**ಮೇಲ್ಕಂಡ ಕಡತದಲ್ಲಿನ ವೆಚ್ಚದೊಂದಿಗೆ ಅಭಿವೃದ್ಧಿ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಅಧಿಕವಾಗಿ ಕೆಳಕಂಡ 3 ಕಡತಗಳಲ್ಲಿನ ಪ್ರದೇಶಗಳ ಭೂಸ್ವಾಧೀನ ವೆಚ್ಚವನ್ನು ಸಹ 2016–17ನೇ ಸಾಲಿನಲ್ಲಿ ರಸ್ತೆ ಅಗಲೀಕರಣ, ಕಸ ಸಂಗ್ರಹಣೆ ಮತ್ತು ಇತರೆ ಕಾರ್ಯ ಲೆಕ್ಕ ಶೀರ್ಷಿಕೆ ಪಿ.0001ಕ್ಕೆ ಹೆಚ್ಚುವರಿ ವೆಚ್ಚವನ್ನು ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

| | | |
|---|---|---|
| **2** | **ಆಡುಗೋಡಿ ವ್ಯಾಪ್ತಿಯಲ್ಲಿನ ವಾರ್ಡ್ 146 ಮತ್ತು 147 ರಲ್ಲಿ ರಸ್ತೆ ಅಗಲೀಕರಣಕ್ಕಾಗಿ 32 ಜನರಿಂದ ವಶಪಡಿಸಿಕೊಂಡ ಭೂಸ್ವಾಧೀನ ಪರಿಹಾರದ ಬಾಬ್ತು** | **12.83 ಕೋಟಿಗಳು** |
| **3** | **ಜಾಲಹಳ್ಳಿ ಪೂರ್ವದ ಮುಖ್ಯರಸ್ತೆ ಜಾಲಹಳ್ಳಿ ವೃತ್ತ ದಿಂದ ಗಂಗಮ್ಮ ವೃತ್ತದ ವರೆಗೆ ಚೈನೇಜ್ 1.20 ರಿಂದ 2.20 ಕಿ.ಮೀ. ವರೆಗೆ ಭೂಸ್ವಾಧೀನದ ಬಾಬ್ತು** | **0.98 ಕೋಟಿಗಳು** |
| **4** | **ರಸ್ತೆ ಮೂಲಭೂತ ಸೌಕರ್ಯ ವಿಭಾಗದ ವಿವಿಧ ಭೂ ಸ್ವಾಧೀನದ ಪರಿಹಾರದ ಬಾಬ್ತು** | **<u>38.50 ಕೋಟಿಗಳು</u>** |
| | **ಒಟ್ಟು ರೂ.** | **240.07 ಕೋಟಿಗಳು** |

***<u>32]. ವಿಷಯದ ಸಂಖ್ಯೆ: ತೆಆಸ್ಥಾಸ/117/2016–17</u>***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 07.01.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಜಯನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ವಾರ್ಡ್ ಸಂಖ್ಯೆ 178ರ ಜೆ.ಪಿ.ನಗರದಲ್ಲಿರುವ ಸಿಂಧೂರ ಕಲ್ಯಾಣ ಮಂಟಪದ ಎದುರುಗಡೆ ಇರುವ ಉದ್ಯಾನವನದ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಬಗ್ಗೆ ರೂ.34.15 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ, 2016–17ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ.0541 (Emergency Reserve Fund, Discretionary Fund of the Commissioner) ಅನುದಾನದಡಿ ಜಾಬ್ ಸಂಖ್ಯೆ ನೀಡಲು ಹಾಗೂ ಅತೀ ತುರ್ತಾಗಿ ಕಾಮಗಾರಿಯನ್ನು ನಿರ್ವಹಿಸಬೇಕಾಗಿರುವುದರಿಂದ ಮೆ: ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖೇನ ನಿರ್ವಹಿಸಲು ಅನುಮೋದನೆ ನೀಡಲು ಕೋರಿ ಪ್ರಸ್ತಾವನೆ ಸಲ್ಲಿಸಿರುವ ಮೇರೆಗೆ ಮಾನ್ಯ ಆಯುಕ್ತರು ರವರು ಮಾನ್ಯ ಕರ್ನಾಟಕ ಉಚ್ಚ

ನ್ಯಾಯಾಲಯವು W.P.ಸಂಖ್ಯೆ 9082/2015ರ ಮೊಕದ್ದಮೆಯಲ್ಲಿ ನೀಡಿರುವ ಆದೇಶದಂತೆ ಈ ಜಾಗದಲ್ಲಿ ಉದ್ಯಾನವನವನ್ನು ನಾಲ್ಕು ತಿಂಗಳ ಅವಧಿಯಲ್ಲಿ ನಿರ್ಮಿಸುವುದು ಅತಿ ಅವಶ್ಯಕವಾಗಿರುತ್ತದೆ. ಹಾಗೂ ಈ ಸ್ವತ್ತಿನಲ್ಲಿ ಉದ್ಯಾನವನವನ್ನು ನಾಲ್ಕು ತಿಂಗಳ ಅವಧಿಯಲ್ಲಿ ನಿರ್ಮಿಸಲಾಗುವುದೆಂದು ಮುಚ್ಚಳಿಕೆ ಪತ್ರ (Affidavit) ನೀಡಿರುವುದರಿಂದ ಹಾಗೂ 2016–17ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ0541 ಅಡಿ ಕೊರತೆ ಅನುದಾನ ಇರುವುದರಿಂದ ಪಾಲಿಕೆಯ ವಿವಿಧ ಲೆಕ್ಕ ಶೀರ್ಷಿಕೆ ಅಡಿ ಉಳಿಕೆ ಅನುದಾನವನ್ನು ಅಳವಡಿಸಿಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸುವುದು ಅವಶ್ಯಕವಾಗಿರುತ್ತದೆ. ಸದರಿ ಪ್ರಕರಣವು ವಿಶೇಷ ಪ್ರಕರಣವೆಂದು ಪರಿಗಣಿಸಿ ರೂ.34.15 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್ ಕೋಡ್ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು ಮಾನ್ಯ ಆಯುಕ್ತರವರು ಆದೇಶಿಸಿರುತ್ತಾರೆ.

ಅದರಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2016–17ನೇ ಸಾಲಿನ ಆಯವ್ಯಯದ ವಿವಿಧ ಲೆಕ್ಕ ಶೀರ್ಷಿಕೆಯಡಿ ಉಳಿಕೆ ಅನುದಾನವನ್ನು ಭರಿಸಿಕೊಂಡು ತುರ್ತಾಗಿ ಕಾಮಗಾರಿಯನ್ನು ನಿರ್ವಹಿಸಬೇಕಾಗಿರುವುದರಿಂದ ಮೆ: ಕೆ.ಆರ್.ಐ.ಡಿ.ಎಲ್ ರವರಿಗೆ ವಹಿಸಿಕೊಡಲು ಹಾಗೂ ಜಾಬ್ ಕೋಡ್ ನೀಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ನೀಡಲು ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 07.01.2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***33]. ವಿಷಯದ ಸಂಖ್ಯೆ: ತೆಆಸ್ಥಾಸ/118/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 02.01.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ವಜ್ಞನಗರ ವಿಭಾಗಕ್ಕೆ ಸಂಬಂಧಿಸಿದಂತೆ, ವಾರ್ಡ್–24 ಹೆಚ್.ಬಿ.ಆರ್ ಲೇಔಟ್ ವ್ಯಾಪ್ತಿಯಲ್ಲಿ 2013–14 ನೇ ಸಾಲಿನ ಶಾಸಕರ ಅನುದಾನದ ಹತ್ತು (10) ಕಾಮಗಾರಿಗಳಿಗೆ 2013–14 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ–2957 Comprehensive Development of Spillover Works in Sarvaganagar Constituency ಅನುದಾನದಡಿಯಲ್ಲಿ ಕಾಮಗಾರಿ ಸಂಕೇತ ನೀಡಲಾಗಿರುತ್ತದೆ. ದಿನಾಂಕ: 30.09.2014 ರಂದು ಮೇ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ಕಾರ್ಯಾದೇಶ ನೀಡಲಾಗಿದ್ದರೂ ಸಹ ಈ ತಹಲ್ವರೆವಿಗೂ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ. ಪ್ರಸ್ತುತ ವಾರ್ಡ್ ಸಂಖ್ಯೆ: 24 ರ ಪಾಲಿಕೆ ಸದಸ್ಯರು ದಿನಾಂಕ: 09.11.2016 ರಂದು ಪತ್ರ ನೀಡಿ ಪ್ರಸ್ತಾಪಿತ ಕಮಗಾರಿಗಳಿಗೆ 2013–14 ನೇ ಸಾಲಿನ ದರಗಳಂತೆ ಅಂದಾಜು ಮೊತ್ತವನ್ನು ತಯಾರಿಸಿದ್ದು, ಹಾಗೂ ಈಗ ಪ್ರಸ್ತುತ 2016–17 ನೇ ಸಾಲಿನಲ್ಲಿ ನಿರ್ವಹಿಸಲು ಮೇ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಯವರು ಸಾಧ್ಯವಿಲ್ಲವೆಂದು ತಿಳಿಸಿರುವ ಮೇರೆಗೆ ಹಗೂ ಸದರಿ ಕಾಮಗಾರಿಗಳಲ್ಲಿ ಸೇರಿರುವ ಕೆಲವೊಂದು ರಸ್ತೆಗಳಲ್ಲಿ ಬೇರೆ ಬೇರೆ ಅನುದಾನದ ಅಡಿಯಲ್ಲಿ ಈಗಾಗಲೆ ಕಾಮಗಾರಿ ಅನುಷ್ಠಾನಗೊಳಿಸಿದ್ದು ವಾರ್ಡ್ ಸಂಖ್ಯೆ:24 ರಲ್ಲಿನ ಕೆಲವೊಂದು ರಸ್ತೆಗಳು ಇನ್ನೂ ಸಹ ಮಣ್ಣಿನ ರಸ್ತೆಗಳಾಗಿದ್ದು, ಅಂತಹ ರಸ್ತೆಗಳನ್ನು ಅಭಿವೃದ್ಧಿ ಪಡಿಸಬೇಕಾಗಿರುವುದು ಅವಶ್ಯಕವಾಗಿದ್ದು, ಮಾನ್ಯ ಬೆಂಗಳೂರು ಅಭಿವೃದ್ಧಿ ಹಾಗೂ ಉಸ್ತುವಾರಿ ಸಚಿವರು ರವರೊಂದಿಗೆ ಈ ಬಗ್ಗೆ ಚರ್ಚಿಸಿದ್ದು, ಪ್ರಸ್ತಾಪಿಸಿರುವ ಬದಲಿ ಕಾಮಗಾರಿಗಳನ್ನು ಕೈಗೊಳ್ಳಲು ಕೋರಿರುತ್ತಾರೆ.

| ಕ್ರಮ ಸಂಖ್ಯೆ | ಕಾಮಗಾರಿ ವಿವರ | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಜಾಬ್ ಸಂಖ್ಯೆ |
|---|---|---|---|
| 1 | Improvements to roads in 42nd cross roads in Ward No-24 | 40.00 | |
| 2 | Improvements to roads in 37th Main roads in Ward No-24 | 40.00 | |
| 3 | Improvements to roads in 38th Main roads in Ward No-24 | 46.00 | |
| 4 | Improvements to roads in 36th Main roads in Ward No-24 | 49.00 | |
| 5 | Improvements to roads in 40th Main road and cross roads in Ward No-24 | 41.00 | |
| 6 | Improvements to roads in 38th cross roads and main road in Ward No-24 | 42.00 | |
| 7 | Improvements to roads in 36th cross roads in Ward No-24 | 49.00 | |
| 8 | Improvements to roads in 41th main road and cross roads in Ward No-24 | 40.00 | |
| 9 | Improvements to roads in 43rd Main road and cross roads in Ward No-24 | 45.00 | |
| 10 | Improvements to roads in 39th main road and cross roads in Ward No-24 | 27.40 | |
| ಒಟ್ಟು | | 419.70 | |

ಕಂಡಿಕೆ 22ರಲ್ಲಿ ಮಾನ್ಯ ಆಯುಕ್ತರು ಅನುಮೋದಿಸಿರುವಂತೆ ಈ ಕೆಳಕಂಡ ಪ್ರಸ್ತಾವನೆಗಳಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಟಿಪ್ಪಣಿಯನ್ನು ತಯಾರಿಸಿ ಮಂಡಿಸಿದೆ.

1. ಕಂಡಿಕೆ–1 ಮತ್ತು 5 ರ ಕಾಲಂ 02 ರಲ್ಲಿನ ಒಟ್ಟು 10 ಕಾಮಗಾರಿಗಳನ್ನು ರದ್ದುಪಡಿಸಿ ಕಂಡಿಕೆ (4) ಮತ್ತು (5)ರ ಕಾಲಂ (3) ರಲ್ಲಿನ ಬದಲಿ 10 ಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ.
2. ಸದರಿ ಬದಲಿ ಕಾಮಗಾರಿಗಳಿಗೆ ಹೊಸದಾಗಿ ಜಾಬ್ ಸಂಖ್ಯೆ ನೀಡಿ ಮೇ॥ ಕೆ.ಆರ್,ಐ.ಡಿ.ಎಲ್ ಸಂಸ್ಥೆ ವತಿಯಿಂದ ನಿರ್ವಹಿಸುವ ಸಂಬಂಧ ಆದೇಶ.
3. ಸದರಿ ಕಾಮಗಾರಿಗಳು ಪ್ರಗತಿಯಲ್ಲಿದ್ದು ಲೆಕ್ಕ ಶೀರ್ಷಿಕೆ ಪಿ–2957 ಅಡಿಯಲ್ಲಿ Re-appropriation ಮಾಡಿ ಬದಲಿ ಕಾಮಗಾರಿ ಸಂಕೇತ ನೀಡಲು.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 02.01.2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *44]. ವಿಷಯದ ಸಂಖ್ಯೆ: ತೆಆಸ್ಥಾಸ/119/2016–17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 07.01.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ದಿನಾಂಕ: 07.01.2017 ರಿಂದ 09.01.2017 ರಅವಧಿಯಲ್ಲಿ ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ ಬೆಂಗಳೂರು ಅಂತರಾಷ್ಟ್ರೀಯ ಪ್ರದರ್ಶನಕೇಂದ್ರ [BIEC] ತುಮಕೂರು ರಸ್ತೆ ಬೆಂಗಳೂರು ಇಲ್ಲಿ ಆಯೋಜಿಸಿರುವ Pravasi Bharatiya Divas-2017ರ ಅಂಗವಾಗಿ ಅನಿವಾಸಿ ಭಾರತೀಯ ಹೂಂಡಿಕೆದಾರರು, ಕೈಗಾರಿಕೋದ್ಯಮಿಗಳು ಹಾಗೂ ಅಂತರಾಷ್ಟ್ರೀಯ ಗೌರವಾನ್ವಿತ ಅತಿಥಿಗಳು ಭಾಗವಹಿಸಲ್ಲಿದಾರೆ. ಈ ಕಾರ್ಯಕ್ರಮವು ಬೆಂಗಳೂರಿನಲ್ಲಿ ಈ ವರ್ಷವು ಜರಗುತ್ತಿರುವುದು ಪ್ರತಿಷ್ಠಿತ ವಿಷಯವಾಗಿರುತ್ತದೆ. ಮಾನ್ಯ ಪ್ರಧಾನಮಂತ್ರಿರವರು, ಗೌರವಾನ್ವಿತ ರಾಷ್ಟ್ರಪತಿಗಳು ಈ ಸಮ್ಮೇಳನಕ್ಕೆ ಆಗಮನಿಸುತ್ತಿದ್ದು ನಗರವನ್ನು ಸುಂದರೀಕರಣಗೊಳಿಸುವುದು ಅತಿ ಮುಖ್ಯವಾಗಿರುತ್ತದೆ. ಸಮ್ಮೇಳನವು

ಬೆಂಗಳೂರು ನಗರವನ್ನು ಜಾಗತಿಕ ಮಟ್ಟದಲ್ಲಿ ಪ್ರತಿಬಿಂಬಿಸುತ್ತಿದ್ದು, ಸದರಿ ಸಮ್ಮೇಳನದ ಪ್ರಾರಂಭಕ್ಕೆ ಅತಿಕಡಿಮೆ ಸಮಯ ಉಳಿದಿರುವ ಹಿನ್ನಲೆಯಲ್ಲಿ ಎಲ್ಲಾ ಪೂರ್ವ ತಯಾರಿಗಳು ದಿನಾಂಕ: 05-01-2017 ಒಳಗಾಗಿ ಮೀಡಿಯನ್‌ಗಳು, ವೃತ್ತಗಳು ಮತ್ತು ಐಲೆಂಡ್‌ಗಳಿಗೆ ತೋಟಗಾರಿಕೆ ವಿಭಾಗದಿಂದ ಲ್ಯಾಡ್‌ಸ್ಕೇಪಿಂಗ್ ಹಾಗೂ ಆಕರ್ಷಕ ಹೂವಿನ ಕುಂಡಗಳನ್ನು ಇಟ್ಟು ಅಲಂಕೃತಗೊಳಿಸಿ ಪೂರ್ಣಗೊಳಿಸಬೇಕೆಂದು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಸೂಚಿಸಿರುತ್ತಾರೆ.

ನಗರದ ಪ್ರಮುಖದ ರಸ್ತೆಯಾದ ಅಂತರಾಷ್ಟ್ರೀಯ ವಿಮಾನ ನಿಲ್ದಾಣ (ಬಳ್ಳಾರಿ ರಸ್ತೆ) ಸೇರಿ ಪ್ರಮುಖ ರಸ್ತೆಗಳಲ್ಲಿ ಸುಂದರೀಕರಣ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಈ ಕಾಮಗಾರಿಗಳನ್ನು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಟೆಂಡರ್‌ನ್ನು ಕರೆದು ಗುತ್ತಿಗೆದಾರರಿಗೆ ವಹಿಸುವುದು ಕಷ್ಟಸಾಧ್ಯವಾಗಿರುತ್ತದೆ. ಆದ್ದರಿಂದ ಕೆ.ಟಿ.ಟಿ.ಪಿ ಕಾಯ್ದೆ ವಿನಾಯಿತಿ (4ಜಿ) ಇರುವ ಕೆ.ಆರ್.ಐ.ಡಿ.ಎಲ್ ಮುಖಾಂತರ ಅನುಷ್ಠಾನಗೊಳಿಸುವುದು.

| ಕ್ರಮ ಸಂಖ್ಯೆ | ವಲಯ ಹೆಸರು | ರಸ್ತೆ ಹೆಸರು | ಮೊತ್ತ (ಲಕ್ಷಗಳಲ್ಲಿ) |
|---|---|---|---|
| 1 | ಯಲಹಂಕ | ಹೊರವರ್ತುಲ ರಸ್ತೆ-ಹೆಬ್ಬಾಳ ಮೇಲು ಸೇತುವೆ ಯಿಂದ ಬಿ.ಇ.ಎಲ್ ಸರ್ಕಲ್ | 70.00 |
| 2 | ಪೂರ್ವ | ಬಳ್ಳಾರಿ ರಸ್ತೆ ಹಾಗೂ ಪ್ರಮುಖ ರಸ್ತೆಗಳು ಮತ್ತು ವೃತ್ತಗಳು | 25.00 |
| 3 | ಪಶ್ಚಿಮ | ಯಶವಂತಪುರ ಮೇಲು ಸೇತುವೆ. | 18.00 |
| | | ಒಟ್ಟು ರೂ. | 113.00 |

ಈ ಮೇಲಿನ ವಲಯ ವ್ಯಾಪ್ತಿಯ ರಸ್ತೆಗಳಲ್ಲಿ ಈಗಾಗಲೇ ಸುಂದರೀಕರಣ (ಭೂ ವಿನ್ಯಾಸ) ಕೆಲಸ ಪೂರ್ಣಗೊಳಿಸಲಾಗಿರುತ್ತದೆ. ನಗರದ ಮೀಡಿಯನ್‌ಗಳು, ವೃತ್ತಗಳನ್ನು ಸುಂದರೀಕರಣದ ಕಾಮಗಾರಿಯ ಲೆಕ್ಕ ಶೀರ್ಷಿಕೆ ಪಿ-3146 ಅಡಿಯಲ್ಲಿ ಯಾವುದೇ ಅನುದಾನ ಲಭ್ಯತೆ ಇಲ್ಲದಿರುವುದು ತಿಳಿದು ಬಂದಿರುತ್ತದೆ ಈಗಾಗಲೇ ನಿರ್ವಹಿಸಿರುವ ಈ ಕಾಮಗಾರಿಗೆ ರೂ.113.00 ಲಕ್ಷಗಳನ್ನು ಮರು ಹೊಂದಾಣಿಕೆ (Re-appropriation) ಮೂಲಕ ಅನುದಾನವನ್ನು ನೀಡುವುದು ಹಾಗೂ ಹಣ ಬಿಡುಗಡೆ ಮಾಡಲು ಸೂಕ್ತ ನಿರ್ಣಯಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆ ಮುಂದೆ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 07.01.2017ರ ಟಿಪ್ಪಣಿಯನ್ನು ಒಪ್ಪುತ್ತಾ, 2016-17ನೇ ಸಾಲಿನ ಆಯವ್ಯಯದ ವಿವಿಧ ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ಉಳಿತಾಯವಾಗುವ ಅನುದಾನದಲ್ಲಿ ಆಯವ್ಯಯ ಪುಟ ಸಂಖ್ಯೆ: 84ರಲ್ಲಿನ ಲೆಕ್ಕಶೀರ್ಷಿಕೆ ಪಿ.3146ಕ್ಕೆ ರೂ.113.00 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಕೆ.ಎಂ.ಸಿ.ಕಾಯ್ದೆ ಸೆಕ್ಷನ್ 172ರ ಅನ್ವಯ ವರ್ಗಾವಣೆ ಮಾಡಿ ಒದಗಿಸಲು ಕ್ರಮಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

**(ಎಂ.ಕೆ. ಗುಣಶೇಖರ್)**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**